# 'ಅರೆಹೊಳೆ ರಂಗ ಹಬ್ಬ' ಉದ್ಘಾಟನೆ



'ಅರೆಹೊಳೆ ರಂಗ ಹಬ್ಬ'ವನ್ನು ದೀಪ ಬೆಳಗಿಸಿ, ಉದ್ಘಾಟಿಸಲಾಯಿತು.

**ಮಹಾನಗರ,** ಡಿ. 19: ಅರೆಹೊಳೆ ಪ್ರತಿಷ್ಠಾನ ಮತ್ತು ಪಾದುವಾ ರಂಗ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ಹಿರಿಯ ರಂಗಕರ್ಮಿ ಸದಾನಂದ ಸುವರ್ಣರ ಗೌರವಾರ್ಥ ರಾಜ್ಯಮಟ್ಟದ ನಾಲ್ಕನೇ 'ಅರೆಹೊಳೆ ರಂಗ ಹಬ್ಬ' ಸೋಮವಾರ ನಗರದ ಡಾನ್‌ಬಾಸ್ಕೋ ಸಭಾಂಗಣದಲ್ಲಿ ಉದ್ಘಾಟನೆಗೊಂಡಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಿಕರ್ನಕಟ್ಟೆ ಶ್ರೀ ಬಲಮುರಿ ಸಿದ್ಧಿವಿನಾಯಕ ದೇವಸ್ಥಾನದ ಮೊಕ್ತೇಸರ ವೇ।ಮೂ। ವಿವೇಕಾನಂದ ನೀಗ್ಲೆ, ಕಲೆ ಒಲಿಯಬೇಕಾದರೆ ಶ್ರಮ ಮತ್ತು ಆಸಕ್ತಿ ಬೇಕು. ಕಲೆ ಒಲಿದರೆ ವಿನಯ ಮನೋಭಾವ ಬೆಳೆಯುತ್ತದೆ ಎಂದರು.

ಹಿರಿಯ ಭಾಗವತ ಕೆ.ಪಿ. ಹೆಗಡೆ ಅವರನ್ನು ಸಮ್ಮಾನಿಸಲಾಯಿತು. ಅಧ್ಯಕ್ಷತೆಯನ್ನು ಧರ್ಮದರ್ಶಿ ಹರಿಕೃಷ್ಣ ಪುನರೂರು ವಹಿಸಿದ್ದರು.

ಹಿರಿಯ ರಂಗಕರ್ಮಿ ಸದಾನಂದ ಸುವರ್ಣ ಉಪಸ್ಥಿತರಿದ್ದರು. ಪ್ರತಿಷ್ಠಾನದ ಅಧ್ಯಕ್ಷ ಅರೆಹೊಳೆ ಸದಾಶಿವ ರಾವ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಯದೇವ ಸ್ವಾಗತಿಸಿದರು. ಡಿ. 22ರ ವರೆಗೆ ಪ್ರತಿದಿನ ಸಾಯಂಕಾಲ 6ರಿಂದ ನಾಟಕ ಮತ್ತು ಸಭಾ ಕಾರ್ಯಕ್ರಮ ನಡೆಯಲಿದೆ.

CS Scanned with CamScanner

# ಅರೆಹೊಳೆ ರಂಗಹಬ್ಬ

ಅರೆಹೊಳೆ ಪ್ರತಿಷ್ಠಾನ ಹಾಗೂ ಪದುವಾ ರಂಗ ಅಧ್ಯಯನ ಕೇಂದ್ರದ ವತಿಯಿಂದ ರಾಜ್ಯಮಟ್ಟದ 4ನೆಯ ಅರೆಹೊಳೆ ರಂಗಹಬ್ಬ ನಡೆಯಲಿದೆ. ಸುದರ್ಶನ ವಿಜಯ, ಯಕ್ಷಗಾನ, ಚಿತ್ರಾ ನೃತ್ಯ ನಾಟಕ, ಸಾಯೋ ಆಟ ಮತ್ತೆ ಹೇಳಿದ ಕಥೆ ನಾಟಕ, ಮಾರನಾಯಕ ನಾಟಕ, ಪಾಪು ಗಾಂಧಿ ಬಾಪು ಗಾಂಧಿ ಆದ ಕಥೆ, ನಿನಗೆ ನೀನೇ ಗೆಳತಿ, ಆಣ್ ಫ್ರಾಂಕ್‌ಳ ಡೈರಿ ನಾಟಕ, ಶಿಲ್ಪಾಜೋಷಿ ಅವರಿಂದ ನನ್ನೊಳಗಿನ ಅವಳು ಏಕವ್ಯಕ್ತಿ ಪ್ರದರ್ಶನ, ಚೋಮನ ದುಡಿ ನಾಟಕ, ರಂಗ ಗೀತೆ, ಸಂಜೆ ಹಾಡು, ನೃತ್ಯ ವರ್ಷಾ, ನೃತ್ಯ ಯಜ್ಞ, ಮುಂತಾದ ಕಾರ್ಯಕ್ರಮಗಳು ನಡೆಯಲಿವೆ.

- ಎಲ್ಲಿ : ಡಾನ್ ಬಾಸ್ಕೊ ಹಾಲ್, ಮಂಗಳೂರು
- ಯಾವಾಗ: ಡಿ.17ರಿಂದ 23.
- ಸಂಜೆ 5.30



Scanned with CamScanner

# 25ಕ್ಕೆ ಗೋಕುಲ ನಿರ್ಗಮನ ಪ್ರದರ್ಶನ

ಮಂಗಳೂರು: ಅರೆಹೊಳೆ ಪ್ರತಿಷ್ಠಾನದ ನಂದಗೋಕುಲ ತಂಡ ನಿರ್ಮಿಸಿದ ಪುತಿನ ಅವರ ಕೃತಿ 'ಗೋಕುಲ ನಿರ್ಗಮನ' ನೃತ್ಯ ನಾಟಕದ 19ನೇ ಪ್ರದರ್ಶನ ಜ.25ರಂದು ಸಾಯಂಕಾಲ 5.30ಕ್ಕೆ ನಗರದ ಕದ್ರಿ ಪಾರ್ಕ್‌ನ ಬಯಲು ರಂಗ ವೇದಿಕೆಯಲ್ಲಿ ಪ್ರದರ್ಶನಗೊಳ್ಳಲಿದೆ. ನಂದಗೋಕುಲ ಕಲಾವಿದರು ಅಭಿನಯಿಸುವ ಈ ನೃತ್ಯ ನಾಟಕವನ್ನು ಶ್ವೇತಾ ಅರೆಹೊಳೆ ನಿರ್ದೇಶಿಸಿದ್ದು, ಶೋಧನ್ ಎರ್ಮಾಳ್ ಹಾಗೂ ಗುರುರಾಜ್ ಎಂ.ಬಿ ಅವರ ಸಂಗೀತವಿದೆ. ಗೀತಾ ಅರೆಹೊಳೆ ವಸ್ತ್ರವಿನ್ಯಾಸ, ಕ್ರಿಸ್ಟೋಫರ್ ನೀನಾಸಂ ಅವರ ಬೆಳಕಿನ ವಿನ್ಯಾಸವಿದೆ.

# ಅರೆಹೊಳೆ ರಂಗ ನಡೆ ಉದ್ಘಾಟನೆ

ಮಂಗಳೂರು: ಅರೆಹೊಳೆ ಪ್ರತಿಷ್ಠಾನ ಪಾದುವಾ ರಂಗ ಅಧ್ಯಯನ ಕೇಂದ್ರ, ಲೋಗೋಸ್ ಥಿಯೇಟರ್ ಗ್ರೂಪ್ ಹಾಗೂ ಅಸ್ತಿತ್ವ ಸಹಯೋಗದಲ್ಲಿ 'ರಂಗ ನಡೆ-2020' ಎಂಬ ವಿನೂತನ ಪ್ರಯೋಗವನ್ನು ಆರಂಭಿಸಿದ್ದು, ಅದರ ಮೊದಲ ಕಾರ್ಯಕ್ರಮ ಜ.25ರಂದು ಪಾದುವಾ ಕಾಲೇಜಿನ ಬಯಲು ರಂಗ ವೇದಿಕೆಯಲ್ಲಿ ಉದ್ಘಾಟನೆಗೊಳ್ಳಲಿದೆ. ರಂಗಕರ್ಮಿ ಹಾಗೂ ರಂಗ ಸಮಾಜದ ಸದಸ್ಯ ಜೀವನರಾಂ ಸುಳ್ಯ ರಂಗನಡೆ ಉದ್ಘಾಟಿಸಲಿದ್ದು, ಅರೆಹೊಳೆ ಪ್ರತಿಷ್ಠಾನದ ಗೌರವಾಧ್ಯಕ್ಷ ಹರಿಕೃಷ್ಣ ಪುನರೂರು ಅಧ್ಯಕ್ಷತೆ ವಹಿಸಲಿದ್ದಾರೆ. ರಂಗ ನಿರ್ದೇಶಕ ಡಾ.ಶ್ರೀಪಾದ ಭಟ್, ಪಾದುವಾ ಕಾಲೇಜು ಪ್ರಾಂಶುಪಾಲ ಫಾ.ಆಲ್ವಿನ್ ಸೆರಾವೋ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತ ರಂಗಕರ್ಮಿ ವಿಜಯ ಕುಮಾರ್ ಕೊಡಿಯಾಲ್ ಬೈಲ್ ಅವರನ್ನು ಸನ್ಮಾನಿಸಲಾಗುವುದು. ನಂತರ ಸಾಗರದ ಸ್ಪಂದನ ತಂಡದವರಿಂದ ಡಾ.ಶ್ರೀಪಾದ್ ಭಟ್ ನಿರ್ದೇಶನದಲ್ಲಿ, 'ಯುದ್ಧ ಬಂತು ಮನೆ ಬಾಗಿಲಿಗೆ' ಪ್ರದರ್ಶನ ನಡೆಯಲಿದೆ ಎಂದು ಅರೆಹೊಳೆ ಪ್ರತಿಷ್ಠಾನದ ಗೌರವಾಧ್ಯಕ್ಷ ಹರಿಕೃಷ್ಣ ಪುನರೂರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Scanned with CamScanner

# ಅರೆಹೊಳೆ ರಂಗ ಹಬ್ಬ ನಾಟಕೋತ್ಸವ ಉದ್ಘಾಟನೆ

■ **ವಿಕ ಸುದ್ದಿಲೋಕ** ಮಂಗಳೂರು

ರಂಗ ಚಟುವಟಿಕೆಗಳ ಮೂಲಕ ನಮ್ಮ ಸುತ್ತಲಿನ ವಾತಾವರಣದಲ್ಲಿ ಗಣನೀಯ ವಾದ ಧನಾತ್ಮಕ ಬದಲಾವಣೆಗಳನ್ನು ತರಬಹುದು ಮತ್ತು ನಾಟಕಗಳು ಈ ನಿಟ್ಟಿನಲ್ಲಿ ಹೆಚ್ಚು ಹೆಚ್ಚು ಪ್ರದರ್ಶನಗಳಾಗುತ್ತಿರಬೇಕು ಎಂದು ಮಂಗಳೂರು ವಿಶ್ವವಿದ್ಯಾಲಯದ ಕನಕದಾಸ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಧನಂಜಯ ಕುಂಬ್ಳೆ ಹೇಳಿದರು.

ಪಾದುವಾ ಕಾಲೇಜಿನ ರಂಗ ಮಂದಿರದಲ್ಲಿ ಅರೆಹೊಳೆ ಪ್ರತಿಷ್ಠಾನ, ಪಾದುವಾ ರಂಗ ಅಧ್ಯಯನ ಕೇಂದ್ರ ಹಾಗೂ ಅಸ್ತಿತ್ವ ಸಂಸ್ಥೆಗಳು ಆಯೋಜಿಸಿದ್ದ ರಾಜ್ಯ ಮಟ್ಟದ ಐದನೇ ಅರೆಹೊಳೆ ರಂಗ ಹಬ್ಬದ ನಾಟಕೋತ್ಸವ ಉದ್ಘಾಟಿಸಿ ಮಾತನಾಡಿದರು.

ಮರಾಠಿ ಮತ್ತು ಕನ್ನಡದ ನೆಲದಲ್ಲಿ ಅಪ್ರತಿಮ ಸಾಧನೆಯನ್ನು ಮಾಡಿದ ಹಿರಿಯ ರಂಗ ಕರ್ಮಿ ಸದಾನಂದ ಸುವರ್ಣ ಅವರ ಗೌರವಾರ್ಥ ಅರೆಹೊಳೆ ಪ್ರತಿಷ್ಠಾನದಂತ ಸಂಸ್ಥೆಗಳು ರಂಗ ಹಬ್ಬವನ್ನು ಪ್ರತೀ ವರ್ಷ ಆಯೋಜಿಸುತ್ತಿರುವುದು ಅಭಿನಂದನಾರ್ಹ ಎಂದರು. ಅರೆಹೊಳೆ ಪ್ರತಿಷ್ಠಾನದ ಗೌರವಾಧ್ಯಕ್ಷ ಹರಿಕೃಷ್ಣ ಪುನರೂರು ಅಧ್ಯಕ್ಷತೆ ವಹಿಸಿದ್ದರು. ಪಾದುವಾ ಕಾಲೇಜಿನ ಪ್ರಿನ್ಸಿಪಾಲ್ ಫಾ.ಆಲ್ವಿನ್ ಸೆರಾವೋ, ನಾಟಕದ ಪ್ರಾಯೋಜಕತ್ವ ವಹಿಸಿದ್ದ ಲಯನ್ಸ್ ಕ್ಲಬ್ ಕಂಕನಾಡಿ ಪಡೀಲ್ ಅಧ್ಯಕ್ಷ ರವೀಂದ್ರನಾಥ್ ಶೆಟ್ಟಿ ಅರೆಹೊಳೆ ಪ್ರತಿಷ್ಠಾನದ ಗೌರವ ಸಲಹೆಗಾರ ಕೆ.ಸಿ. ಪ್ರಭು ಹಾಗೂ ಸದಾನಂದ ಸುವರ್ಣ ಉಪಸ್ಥಿತರಿದ್ದರು.

ಅರೆಹೊಳೆ ಸದಾಶಿವ ರಾವ್ ಸ್ವಾಗತಿಸಿದರು. ವಿಶಾಲಾಕ್ಷಿ ರಾವ್ ವಂದಿಸಿದರು. ನಂದಗೋಕುಲದ ನಿರ್ದೇಶಕಿ ಶ್ವೇತಾ ಅರೆಹೊಳೆ ಹಾಗೂ ಸಹಾಯಕ ನಿರ್ದೇಶಕಿ ಪೃಥ್ವಿ ರಾವ್ ಕಾರ್ಯಕ್ರಮ ನಿರೂಪಿಸಿದರು. ನಂತರ ಮಣಿಪಾಲದ ಸಂಗಮ ಕಲಾವಿದರ ತಂಡದಿಂದ ಎಂ. ಗಣೇಶ್ ಉಡುಪಿ ನಿರ್ದೇಶನದ, ಕುವೆಂಪು ಅವರ ರಾಮಾಯಣ ದರ್ಶನಂದಿಂದ ಆಯ್ದ ಕಥಾಭಾಗ ವಾಲಿ ವಧೆ ನಾಟಕ ಪ್ರದರ್ಶನಗೊಂಡಿತು.



ಅರೆಹೊಳೆ ರಂಗ ಹಬ್ಬದ ನಾಟಕೋತ್ಸವ ಉದ್ಘಾಟನೆಗೊಂಡಿತು.

CS Scanned with CamScanner

# ಅರೆಹೊಳೆ ರಂಗ ಹಬ್ಬಕ್ಕೆ ಚಾಲನೆ




■ **ವಿಕ ಸುದ್ದಿಲೋಕ** ಮಂಗಳೂರು

ಅರೆಹೊಳೆ ಪ್ರತಿಷ್ಠಾನ ಮತ್ತು ಪಾದುವಾ ರಂಗ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ಹಿರಿಯ ರಂಗಕರ್ಮಿ ಸದಾನಂದ ಸುವರ್ಣ ಅವರ ಗೌರವಾರ್ಥ ರಾಜ್ಯಮಟ್ಟದ ನಾಲ್ಕನೇ 'ಅರೆಹೊಳೆ ರಂಗ ಹಬ್ಬ'ಕ್ಕೆ ಸೋಮವಾರ ನಗರದ ಡಾನ್‌ಬಾಸ್ಕೋ ಸಭಾಂಗಣದಲ್ಲಿ ಚಾಲನೆ ನೀಡಲಾಯಿತು.

ಬಿಕರ್ನಕಟ್ಟೆ ಶ್ರೀ ಬಲಮುರಿ ಸಿದ್ಧಿವಿನಾಯಕ ದೇವಸ್ಥಾನದ ಮೊಕ್ತೇಸರ ವೇದಮೂರ್ತಿ ವಿವೇಕಾನಂದ ನೀಗ್ಲೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕಲೆ ಒಲಿಯಬೇಕಾದರೆ ಶ್ರಮ ಮತ್ತು ಆಸಕ್ತಿ ಬೇಕು. ಕಲೆ ಒಲಿದರೆ ವಿನಯ ಮನೋಭಾವ ಬೆಳೆಯುತ್ತದೆ. ಸಮಾಜದಿಂದ ಗೌರವಕ್ಕೆ ಪಾತ್ರನಾಗುತ್ತಾನೆ ಎಂದು ಹೇಳಿದರು.

ಧರ್ಮದರ್ಶಿ ಹರಿಕೃಷ್ಣ ಪುನರೂರು ಅಧ್ಯಕ್ಷತೆ ವಹಿಸಿದ್ದರು. ಹಿರಿಯ ರಂಗಕರ್ಮಿ ಸದಾನಂದ ಸುವರ್ಣ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಹಿರಿಯ ಭಾಗವತ ಕೆ.ಪಿ.ಹೆಗಡೆ ಅವರನ್ನು ಸನ್ಮಾನಿಸಲಾಯಿತು.

ಪ್ರತಿಷ್ಠಾನದ ಅಧ್ಯಕ್ಷ ಅರೆಹೊಳೆ ಸದಾಶಿವ ರಾವ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಯದೇವ ಸ್ವಾಗತಿಸಿದರು. ಡಿ.22ರವರೆಗೆ ಪ್ರತಿದಿನ ಸಂಜೆ 6ರಿಂದ ನಾಟಕ ಮತ್ತು ಸಭಾ ಕಾರ್ಯಕ್ರಮ ನಡೆಯಲಿದೆ.

Scanned with CamScanner

# ಅರೆಹೊಳೆ ರಂಗ ಹಬ್ಬ ಸಮಾರೋಪ

■ ವಿಕ ಸುದ್ದಿಲೋಕ ಮಂಗಳೂರು

ಸಾಮಾಜಿಕ ಸ್ವಾಸ್ಥ್ಯವನ್ನು ಸುಸ್ಥಿತಿ ಯಲ್ಲಿಡಲು ಕೇವಲ ಅಕಾಡೆಮಿಕ್ ಶಿಕ್ಷಣಕ್ಕೆ ಹೊರತಾಗಿ ಲಲಿತ ಕಲೆಗಳತ್ತಲೂ ಮಕ್ಕಳನ್ನು ಆಸಕ್ತರನ್ನಾಗಿಸುವ ಜವಾಬ್ದಾರಿ ಹಿರಿಯರ ಮೇಲಿದೆ ಎಂದು ಲೆಕ್ಕ ಪರಿಶೋಧಕ ಎಸ್.ಎಸ್.ನಾಯಕ್ ಹೇಳಿದರು.



ಪ್ರತಿಷ್ಠಾನ ಆರಂಭಿಸಲಿರುವ ರಂಗ ಅಧ್ಯಯನ ಕೇಂದ್ರದ ಲಾಂಛನ ಬಿಡುಗಡೆಗೊಳಿಸಲಾಯಿತು.

ಅವರು ಅರೆಹೊಳೆ ಪ್ರತಿಷ್ಠಾನ, ಪಾದುವಾ ರಂಗ ಅಧ್ಯಯನ ಕೇಂದ್ರ ಹಾಗೂ ಅಸ್ತಿತ್ವ ಸಂಸ್ಥೆಗಳು ಜಂಟಿಯಾಗಿ ಹಿರಿಯ ರಂಗ ಕರ್ಮಿ ಸದಾನಂದ ಸುವರ್ಣರ ಗೌರವಾರ್ಥ ಏರ್ಪಡಿಸಿದ್ದ 5ನೇ ವರ್ಷದ ರಾಜ್ಯಮಟ್ಟದ ಅರೆಹೊಳೆ ರಂಗ ಹಬ್ಬದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಕಲಾವಿದ ದಿನೇಶ್ ಹೊಳ್ಳ ರಚಿಸಿದ ಅರೆಹೊಳೆ ಪ್ರತಿಷ್ಠಾನ ಆರಂಭಿಸಲಿರುವ ರಂಗ ಅಧ್ಯಯನ ಕೇಂದ್ರದ ಲಾಂಛನ ಮತ್ತು ರಂಗಕರ್ಮಿ ಸದಾನಂದ ಸುವರ್ಣ ಬಿಡುಗಡೆಗೊಳಿಸಿದರು. ಕಲಾವಿದ ದಿನೇಶ್ ಹೊಳ್ಳ, ಯಾವುದೆ ಪ್ರಸಿದ್ಧಿಯ ಹಿಂದೆ ಹೋಗದೇ ತಮ್ಮ ಪಾಡಿಗೆ ಕೆಲಸ ಮಾಡುವ ಅರೆಹೊಳೆ ಪ್ರತಿಷ್ಠಾನದಂತಹ ಸಂಸ್ಥೆಗಳು ಹೆಚ್ಚಲಿ ಎಂದರು.

ಅತಿಥಿ ಯಕ್ಷಾಭಿನಯ ಸ್ಥಾಪಕಾಧ್ಯಕ್ಷ ಪ್ರಶಾಂತ್ ಕುಮಾರ್ ಶೆಟ್ಟಿ ಕಲಾವಿದ ಬೆಳೆಯಬೇಕಾದರೆ ಇಂತಹ ಹಬ್ಬಗಳು ಅಗತ್ಯ ಎಂದರು. ಹಿರಿಯ ರಂಗಕರ್ಮಿ ಸದಾನಂದ ಸುವರ್ಣ, ಪಾದುವಾ ಕಾಲೇಜಿನ ಪ್ರಿನ್ಸಿಪಾಲ್ ರೆ.ಫಾ.ಆಲ್ವಿನ್ ಸೆರವೋ ಉಪಸ್ಥಿತರಿದ್ದರು. ಅರೆಹೊಳೆ ಸದಾಶಿವ ರಾವ್ ಸ್ವಾಗತಿಸಿ, ನಿರೂಪಿಸಿದರು. ಪ್ರತಿಷ್ಠಾನದ ಗೌರವಾಧ್ಯಕ್ಷ ಕೆ.ಸಿ. ಪ್ರಭು ವಂದಿಸಿದರು. ಸಮಾರಂಭದ ಆರಂಭದಲ್ಲಿ ಅಗಲಿದ ಪೇಜಾವರ ಶ್ರೀಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

Scanned with CamScanner

# ‘ರಂಗಚಟುವಟಿಕೆಯ ನಿರಂತರತೆ ತಪಸ್ಸಿನಂತೆ’

**ಸಂತೂರು,** ಫೆ. 3: ರಂಗ ಚಟುವಟಿಕೆಯ ನಿರಂತರತೆ ತಪಸ್ಸಿನಂತೆ. ಅದನ್ನು ನಿರ್ವಹಿಸುವುದು ಸವಾಲಿನ ಕೆಲಸವಾದರೂ, ಕಠಿನ ಶ್ರಮದಿಂದ ರಂಗಭೂಮಿಯಲ್ಲಿ ಸಾಧಿಸಲು ಸಾಧ್ಯ ಎಂದು ಸಂತ ಅಲೋಶಿಯಸ್ ಕಾಲೇಜಿನ ಸಹ ಪ್ರಾಧ್ಯಾಪಕ ಡಾ। ದಿನೇಶ ನಾಯಕ್ ಅವರು ಹೇಳಿದರು.

ಅರೆಹೊಳೆ 'ರಂಗ ನಡೆ-2020' ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಯಾಗಿದ್ದರು.

ರಂಗಭೂಮಿ ಚಟುವಟಿಕೆ ಹಾಗೂ ಸಂಘಟನೆ ಅತ್ಯಂತ ಕಷ್ಟದಾಯಕವಾಗಿರುವ ಈ ದಿನಗಳಲ್ಲಿ ರಂಗ ನಡೆ ಎಂಬ ವಿನೂತನ ಕಲ್ಪನೆಯಲ್ಲಿ ನಿರಂತರ ರಂಗಸಕ್ರಿಯತೆಗೆ ಸಾಕ್ಷಿಯಾಗಿರುವ ಅರೆಹೊಳೆ ಪ್ರತಿಷ್ಠಾನ ಹಾಗೂ ಪಾದುವಾ ರಂಗ ಅಧ್ಯಯನ ಕೇಂದ್ರ ಹಾಗೂ ಅಸ್ತಿತ್ವದಂತಹ ಸಂಸ್ಥೆಗಳೂ ಮಂಗಳೂರಿನಲ್ಲಿ ರಂಗ ಭೂಮಿಗೊಂದು ಹೊಸ ಆಯಾಮ ಸೃಷ್ಟಿಸಿವೆ ಎಂದರು.

ರಂಗಾಭಿನಂದನೆ ಸ್ವೀಕರಿಸಿ ಮಾತನಾಡಿದ ಹಿರಿಯ ರಂಗ ಕಲಾವಿದೆ ಮಂಜುಳಾ ಜನಾರ್ದನ, ಇಂತಹ ಅಭಿನಂದನೆಗಳು ರಂಗ ಕಲಾವಿದರ ಉತ್ಸಾಹ ವೃದ್ಧಿಗೆ ಕಾರಣವಾಗುತ್ತದೆ



ಅರೆಹೊಳೆ 'ರಂಗ ನಡೆ-2020' ಕಾರ್ಯಕ್ರಮ ನಡೆಯಿತು.

ಎಂದರು. ರಂಗನಿರ್ದೇಶಕ ಡಾ। ಶ್ರೀಪಾದ ಭಟ್ ಅವರು ತಮ್ಮ ನಿರ್ದೇಶನದ ನಾಟಕ 'ಕಂಸಾಯಣ'ದ ಬಗ್ಗೆ ಮಾತಾಡಿದರು. ನಾಟಕವನ್ನು ಹಿರಿಯ ರಂಗ ಕರ್ಮಿ ಸದಾನಂದ ಸುವರ್ಣ ಲೋಕಾರ್ಪಣೆಗೊಳಿಸಿ, ರಂಗ ಸಂಘಟನೆಯೊಂದಿಗೆ ನಿರ್ಮಾಣವನ್ನೂ ಮಾಡುವ ಮೂಲಕ, ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳನ್ನು ರಂಗದಲ್ಲಿ ಅವಕಾಶ ಕಲ್ಪಿಸಿ ಬೆಳೆಸುವ ಕಾರ್ಯ ಶ್ಲಾಘನೀಯ ಎಂದರು.

ಪ್ರತಿಷ್ಠಾನದ ಗೌರವಾಧ್ಯಕ್ಷ ಕೆ.ಸಿ. ಪ್ರಭು ಅಧ್ಯಕ್ಷತೆ ವಹಿಸಿದ್ದರು. ಅರೆಹೊಳೆ ಸದಾಶಿವ ರಾವ್ ಸ್ವಾಗತಿಸಿದರು. ಅಸ್ತಿತ್ವದ ಕ್ರಿಸ್ಟೋಫರ್ ಡಿ'ಸೋಜಾ ವಂದಿಸಿದರು. ಬಳಿಕ ನಂದಗೋಕುಲ ಕಲಾವಿದರಿಂದ ಡಾ। ಎಚ್.ಎಸ್. ವೆಂಕಟೇಶ ಮೂರ್ತಿಯವರ ರಚನೆಯ ನಾಟಕ 'ಕಂಸಾಯಣ' ಡಾ। ಶ್ರೀಪಾದ ಭಟ್ ನಿರ್ದೇಶನದಲ್ಲಿ ಪ್ರಸ್ತುತಗೊಂಡಿತು.

Scanned with CamScanner

### ಅರೆಹೊಳೆ ರಂಗಹಬ್ಬಕ್ಕೆ ಚಾಲನೆ ನೀಡಿದ ಕೆ.ವಿ. ಅಕ್ಷರ

# ವಿರೋಧಾಭಾಸದ ಕಾಲದಲ್ಲಿ ಸಾಂಸ್ಕೃತಿಕ ಕ್ಷೇತ್ರ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಬಿ.ಆರ್. ವೆಂಕಟರಮಣ ಐತಾಳ್‌ಗೆ ರಂಗಭೂಮಿ ಪುರಸ್ಕಾರ
- ಡಾ. ಶ್ರೀಪಾದ್ ಭಟ್ ಅವರಿಂದ ಅಭಿನಂದನಾ ಭಾಷಣ
- ಚಿತ್ರಾ ನಾಟಕ ಪ್ರದರ್ಶನ

ಮಂಗಳೂರು: ಕಾರ್ಪೊರೇಟ್ ಕಂಪೆನಿಗಳು ಮುಂದಿನ ಐದು ವರ್ಷಗಳಿಗೆ ದೂರದೃಷ್ಟಿಯ ಯೋಜನೆಯೊಂದನ್ನು ರೂಪಿಸಿದಂತೆ ಸಾಂಸ್ಕೃತಿಕ ಕ್ಷೇತ್ರವು ಸಮರ್ಥ ದಿಕ್ಸೂಚಿಯನ್ನು ರೂಪಿಸುವುದು ಸಾಧ್ಯವಿಲ್ಲದ ಸ್ಥಿತಿಯಲ್ಲಿದೆ. ವಿರೋಧಾಭಾಸಗಳ ಈ ಕಾಲದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಸಾಹಸಶೀಲತೆಯಿಂದಲೇ ನಡೆಸಬೇಕಾಗಿದೆ ಎಂದು ಹೆಗ್ಗೋಡು ನೀನಾಸಂನ ಹಿರಿಯ ರಂಗಕರ್ಮಿ ಕೆ.ವಿ. ಅಕ್ಷರ ಹೇಳಿದರು.

ಅರೆಹೊಳೆ ಪ್ರತಿಷ್ಠಾನದ ವತಿಯಿಂದ ಡಾನ್ ಬಾಸ್ಕೊ ಸಭಾಂಗಣದಲ್ಲಿ ಆಯೋಜಿಸಲಾದ 'ಅರೆಹೊಳೆ ರಂಗಹಬ್ಬ' ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ ಎರಡು ದಶಕಗಳಲ್ಲಿ ರಂಗಭೂಮಿ ಕ್ಷೇತ್ರಕ್ಕೆ ಪ್ರೋತ್ಸಾಹ ಜಾಸ್ತಿ ಆಗಿದೆ. ಈ ಕ್ಷೇತ್ರದಲ್ಲಿ ಭಾಗವಹಿಸುವವರ ಸಂಖ್ಯೆಯೂ ಜಾಸ್ತಿಯಾಗಿದೆ. ಆದರೆ ಗುಣಮಟ್ಟ ಜಾಸ್ತಿಯಾಗಿಲ್ಲ ಎನ್ನುವುದು ಬೇಸರ. ಟಿವಿ ವಾಹಿನಿಗಳ ಸಂಖ್ಯೆ ಹೆಚ್ಚಾಗುತ್ತಿದ್ದಂತೆಯೇ ರಂಗಭೂಮಿಗೆ ಬರುವವರ ಸಂಖ್ಯೆ ಒಂದೆರಡು ವರ್ಷ ಕಡಿಮೆಯಾದರೂ ಬಳಿಕ ಪ್ರೇಕ್ಷಕರು, ಕಲಾವಿದರು ಮತ್ತೆ ರಂಗಭೂಮಿಯತ್ತ ಮುಖ ಮಾಡಿದರು. ಆದರೆ ಒಂದು ನಾಡನ್ನು ಕಟ್ಟಬಹುದಾದ ಸಾಮರ್ಥ್ಯ ಇರುವ ರಂಗಭೂಮಿ ಮಾಧ್ಯಮಕ್ಕಾಗಲೀ ಅಥವಾ ಇತರ ಯಾವುದೇ ಕಲಾಪ್ರಕಾರಗಳಿಗೇ ಆಗಲಿ ದಿಕ್ಸೂಚಿಯನ್ನು ಇರಿಸಿಕೊಂಡು ಮುಂದುವರೆಯುವ ಅನುಕೂಲಕರ ಸ್ಥಿತಿ ಈಗಿಲ್ಲ' ಎಂದು ಹೇಳಿದರು.

ಕಟ್ಟುವ ನಿಟ್ಟಿನಲ್ಲಿ ತಿಳಿವಳಿಕೆಯು ವಿಕಾಸವಾಗುತ್ತಿಲ್ಲ. ಆದರೆ ಹತಾಶೆಯ ಸ್ಥಿತಿ ತಲುಪದೇ ಕರ್ತವ್ಯ ನಿಭಾಯಿಸುವ ಕೆಲಸಗಳು ನಡೆಯುತ್ತಲೇ ಇವೆ ಎಂದು ಅವರು ಅಭಿಪ್ರಾಯಪಟ್ಟರು.

ಅರೆಹೊಳೆ ರಂಗಭೂಮಿ ಪ್ರಶಸ್ತಿಯನ್ನು ನೀನಾಸಂ ಪ್ರಾಂಶುಪಾಲರಾದ ಬಿ.ಆರ್. ವೆಂಕಟರಮಣ ಐತಾಳ್ ಅವರಿಗೆ ಪ್ರದಾನ ಮಾಡಲಾಯಿತು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, 'ಮನುಷ್ಯನು ನೆನಪುಗಳ ಆಧಾರದಲ್ಲಿಯೇ ಜೀವಿಸುತ್ತಾನೆ. ಆದರೆ ಸ್ಮೃತಿ ಕೋಶದಿಂದ ಬೇಕಾದ ನೆನಪುಗಳನ್ನು ಆಯ್ದುಕೊಂಡು ಸಾಮುದಾಯಿಕವಾಗಿ ಒಳಿತಾಗುವ ಕೆಲಸಗಳನ್ನು ಮಾಡುತ್ತಾ ಜೀವನ ಮಾಡಬೇಕೇ ಹೊರತು, ಬೇಡದ ನೆನಪುಗಳನ್ನು ಕೆದಕಿ ಮನಸ್ಸನ್ನು ಭ್ರಷ್ಟಗೊಳಿಸುವುದು ಸರಿಯಲ್ಲ. ಬೇಕಾದ ನೆನಪುಗಳನ್ನು ಆರಿಸಿ, ಸಾಮುದಾಯಿಕವಾಗಿ ಬಾಳುವೆ ಮಾಡುವ ನಿಟ್ಟಿನಲ್ಲಿ ಸಾಂಸ್ಕೃತಿಕ ವಲಯವು ಉತ್ತಮ ಕೆಲಸ ಮಾಡಬಲ್ಲುದು. ಅದಕ್ಕೆ ಪೂರಕ ವಾತಾವರಣ ಸೃಷ್ಟಿಯಾಗಬೇಕು' ಎಂದು



ಮಂಗಳೂರಿನ ಡಾನ್‌ಬಾಸ್ಕೊ ಸಭಾಂಗಣದಲ್ಲಿ ನಡೆಯುತ್ತಿರುವ ಅರೆಹೊಳೆ ರಂಗಹಬ್ಬದಲ್ಲಿ ಮಂಗಳವಾರ ನೀನಾಸಂ ಪ್ರಾಂಶುಪಾಲ ಬಿ.ಆರ್. ವೆಂಕಟರಮಣ ಐತಾಳ್ ಅವರಿಗೆ ಅರೆಹೊಳೆ ರಂಗಭೂಮಿ ಪುರಸ್ಕಾರ ನೀಡಲಾಯಿತು.



ಅರೆಹೊಳೆ ರಂಗಹಬ್ಬದಲ್ಲಿ ಮಂಗಳವಾರ ಡಾ. ಶ್ರೀಪಾದ್ ಭಟ್ ನಿರ್ದೇಶನದ 'ಚಿತ್ರಾ' ನಾಟಕವನ್ನು ಕಲಾವಿದರು ಪ್ರದರ್ಶಿಸಿದರು. – ಪ್ರಜಾವಾಣಿ ಚಿತ್ರಗಳು

ರಂಗನಿರ್ದೇಶಕ ಡಾ. ಶ್ರೀಪಾದ ಭಟ್ ಅಭಿನಂದನಾ ಭಾಷಣ ಮಾಡಿದರು. ಹಿರಿಯ ರಂಗಕರ್ಮಿ ಸದಾನಂದ ಸುವರ್ಣ, ಮಾಜಿ ಯೋಧ ತಾರಾನಾಥ ಬೋಳಾರ್, ಪ್ರತಿಷ್ಠಾನದ ಗೌರವಾಧ್ಯಕ್ಷ ಹರಿಕೃಷ್ಣ ಪುನರೂರು ಇದ್ದರು. ಬಳಿಕ ಡಾ. ಶ್ರೀಪಾದ ಭಟ್ ನಿರ್ದೇಶನದ 'ಚಿತ್ರಾ' ನಾಟಕ ಪ್ರದರ್ಶನಗೊಂಡಿತು.

Scanned with CamScanner

## ಅರೆಹೊಳೆ ರಂಗ ಹಬ್ಬದ ನಾಟಕೋತ್ಸವ ಉದ್ಘಾಟನೆ

# ‘ರಂಗ ಚಟುವಟಿಕೆಗಳಿಂದ ಧನಾತ್ಮಕ ಬದಲಾವಣೆ’



ಡಾ। ಧನಂಜಯ ಕುಂಬ್ಳೆ ಅವರು ಚೆಂಡೆ ಬಾರಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

**ಮಹಾನಗರ,** ಡಿ. 19: ರಂಗ ಚಟುವಟಿಕೆಗಳ ಮೂಲಕ ನಮ್ಮ ಸುತ್ತಲಿನ ವಾತಾವರಣದಲ್ಲಿ ಗಣನೀಯವಾದ ಧನಾತ್ಮಕ ಬದಲಾವಣೆಗಳನ್ನು ತರಬಹುದು ಮತ್ತು ನಾಟಕಗಳು ಈ ನಿಟ್ಟಿನಲ್ಲಿ ಹೆಚ್ಚು ಹೆಚ್ಚು ಪ್ರದರ್ಶನಗಳಾಗುತ್ತಿರಬೇಕು ಎಂದು ಮಂಗಳೂರು ವಿಶ್ವ ವಿದ್ಯಾನಿಲಯದ ಕನಕ ದಾಸ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ। ಧನಂಜಯ ಕುಂಬ್ಳೆ ಹೇಳಿದರು.

ಪಾದುವಾ ಕಾಲೇಜಿನ ರಂಗ ಮಂದಿರದಲ್ಲಿ ಅರೆಹೊಳೆ ಪ್ರತಿಷ್ಠಾನ, ಪಾದುವಾ ರಂಗ ಅಧ್ಯಯನ ಕೇಂದ್ರ ಹಾಗೂ ಅಸ್ತಿತ್ವ ಸಂಸ್ಥೆಗಳು ಆಯೋಜಿಸಿದ್ದ ರಾಜ್ಯ ಮಟ್ಟದ 5ನೇ ಅರೆಹೊಳೆ ರಂಗ ಹಬ್ಬದ ನಾಟಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು ಮರಾಠಿ ಮತ್ತು ಕನ್ನಡದ ನೆಲದಲ್ಲಿ ಅಪ್ರತಿಮ ಸಾಧನೆಯನ್ನು ಮಾಡಿದ ಹಿರಿಯ ರಂಗಕರ್ಮಿ ಸದಾನಂದ ಸುವರ್ಣ ಅವರ ಗೌರವಾರ್ಥ ಅರೆಹೊಳೆ ಪ್ರತಿಷ್ಠಾನದಂತ ಸಂಸ್ಥೆಗಳು ರಂಗ ಹಬ್ಬವನ್ನು ಪ್ರತೀ ವರ್ಷ ಆಯೋಜಿಸುತ್ತಿರುವುದು ಅಭಿನಂದನಾರ್ಹ ಎಂದರು.

ಅರೆಹೊಳೆ ಪ್ರತಿಷ್ಠಾನದ ಗೌರವಾಧ್ಯಕ್ಷ ಹರಿಕೃಷ್ಣ ಪುನರೂರು ಅಧ್ಯಕ್ಷತೆ ವಹಿಸಿದ್ದರು. ಪಾದುವಾ ಕಾಲೇಜಿನ ಪ್ರಾಂಶುಪಾಲ ವಂ। ಆಲ್ವಿನ್ ಸೆರಾವೋ, ನಾಟಕದ ಪ್ರಾಯೋಜಕತ್ವ ವಹಿಸಿದ್ದ ಲಯನ್ಸ್ ಕ್ಲಬ್ ಕಂಕನಾಡಿ ಪಡೀಲ್ ಅಧ್ಯಕ್ಷ ರವೀಂದ್ರ ನಾಥ್ ಶೆಟ್ಟಿ ಅರೆಹೊಳೆ ಪ್ರತಿಷ್ಠಾನದ ಗೌರವ ಸಲಹೆಗಾರ ಕೆ.ಸಿ. ಪ್ರಭು ಹಾಗೂ ಸದಾನಂದ ಸುವರ್ಣ ಮೊದಲಾದವರು ಉಪಸ್ಥಿತರಿದ್ದರು.

ಅರೆಹೊಳೆ ಸದಾಶಿವ ರಾವ್ ಸ್ವಾಗತಿಸಿದರು. ವಿಶಾಲಾಕ್ಷಿ ರಾವ್ ವಂದಿಸಿದರು. ನಂದಗೋಕುಲದ ನಿರ್ದೇಶಕಿ ಶ್ವೇತಾ ಅರೆಹೊಳೆ ಮತ್ತು ಸಹಾಯಕ ನಿರ್ದೇಶಕಿ ಪೃಥ್ವಿ ರಾವ್ ನಿರೂಪಿಸಿದರು.

ಮಣಿಪಾಲದ ಸಂಗಮ ಕಲಾವಿದೆಯರ ತಂಡದಿಂದ ಎಂ. ಗಣೇಶ್ ಉಡುಪಿ ನಿರ್ದೇಶನದ, ಕುವೆಂಪು ಅವರ ‘ರಾಮಾಯಣ ದರ್ಶನಂ’ದಿಂದ ಆಯ್ದ ಕಥಾಭಾಗ ವಾಲಿವಧೆ ನಾಟಕ ಪ್ರದರ್ಶನಗೊಂಡಿತು.

Scanned with CamScanner

# ಫಾ. ಆಲ್ವಿನ್ ಸೆರಾವೋಗೆ ಅರೆಹೊಳೆ ರಂಗಭೂಮಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಅರೆಹೊಳೆ ಪ್ರತಿಷ್ಠಾನವು ನೀಡುವ ರಾಜ್ಯ ಮಟ್ಟದ ಅರೆಹೊಳೆ ರಂಗಭೂಮಿಯ 2019ನೇ ಸಾಲಿನ ಪ್ರಶಸ್ತಿಗೆ ಪಾದುವಾ ಕಾಲೇಜಿನ ಪ್ರಾಂಶುಪಾಲ, ರಂಗಕರ್ಮಿ ಫಾದರ್ ಆಲ್ವಿನ್ ಸೆರಾವೋ ಅವರನ್ನು ಆಯ್ಕೆ ಮಾಡಲಾಗಿದೆ.

ಈಗಾಗಲೇ ಅನೇಕ ಕೊಂಕಣಿ ನಾಟಕಗಳನ್ನು ರಚಿಸಿರುವ ಫಾದರ್ ಆಲ್ವಿನ್ ಸೆರಾವೋ ಅವರು, ಪಾದುವಾ ಕಾಲೇಜಿನಲ್ಲಿ ಪಾದುವಾ ರಂಗ ಅಧ್ಯಯನ ಕೇಂದ್ರದ ಮೂಲಕ ವಿದ್ಯಾರ್ಥಿಗಳಿಗೆ ನಿರಂತರ ರಂಗ ಚಟುವಟಿಕೆಗಳನ್ನು ಹಮ್ಮಿಕೊಂಡು ರಂಗ ಶಿಕ್ಷಣ ನೀಡುತ್ತಿದ್ದಾರೆ. ರಂಗಭೂಮಿಯ ಕೊರತೆಯನ್ನು ಪಾದುವಾ ಥಿಯೇಟರ್ ಹಬ್ ಎಂಬ ಸಮಾನ [illegible]ಸ್ಕ ಸಂಘಟಕರನ್ನು ಸೇರಿಸಿ,



ಫಾ. ಆಲ್ವಿನ್ ಸೆರಾವೋ

ಪ್ರತಿ ವಾರಾಂತ್ಯದಲ್ಲಿ ನಾಟಕಗಳನ್ನು ಪ್ರದರ್ಶಿಸುವುದರ ಮೂಲಕ ರಾಜ್ಯಕ್ಕೇ ಮಾದರಿ ಎಂಬ ಕೆಲಸ ಮಾಡುತ್ತಿದ್ದಾರೆ.

ನಾಟಕಕಾರ, ಸಂಘಟಕ, ರಂಗತಜ್ಞ, ರಂಗಕರ್ಮಿಯಾಗಿ ಪಾದುವಾ ಕಾಲೇಜನ್ನು ಜಿಲ್ಲೆಯ ರಂಗ ಕೇಂದ್ರವನ್ನಾಗಿ ನಿರ್ಮಿಸಿದ ಇವರ ಸಾಧನೆಯನ್ನು ಗುರುತಿಸಿ ಈ ವರ್ಷದ ಅರೆಹೊಳೆ ರಂಗಭೂಮಿ ಪ್ರಶಸ್ತಿಯನ್ನು ನೀಡಲಾಗಿದೆ.

ಡಿ.15ರಂದು ಪಾದುವಾ ಕಾಲೇಜಿನ ಬಯಲು ರಂಗಮಂದಿರದಲ್ಲಿ ನಡೆಯಲಿರುವ ಅರೆಹೊಳೆ ರಂಗ ಹಬ್ಬದ ಮೂರನೆಯ ದಿನ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಸುಳ್ಯದ ರಂಗ ಮನೆಯ ಜೀವನರಾಂ ಸುಳ್ಯ, ರಂಗಾಯಣದ ಪ್ರಮಿಳಾ ಬೇಂಗ್ರೆ ಹಾಗೂ ನೀನಾಸಂನ ಬಿ.ಆರ್. ವೆಂಕಟರಮಣ ಐತಾಳರಿಗೆ ಈ ಮೊದಲು ಈ ಪ್ರಶಸ್ತಿ ನೀಡಲಾಗಿತ್ತು. ಪ್ರಶಸ್ತಿ ₹10 ಸಾವಿರ ನಗದು, ಫಲಕಗಳನ್ನು ಒಳಗೊಂಡಿರುತ್ತದೆ ಎಂದು ಅರೆಹೊಳೆ ಪ್ರತಿಷ್ಠಾನದ ಗೌರವಾಧ್ಯಕ್ಷ ಹರಿಕೃಷ್ಣ ಪುನರೂರು ತಿಳಿಸಿದ್ದಾರೆ.

Scanned with CamScanner

# ಆಲ್ವಿನ್ ಸೆರಾವೋಗೆ ಅರೆಹೊಳೆ ರಂಗಭೂಮಿ ಪ್ರಶಸ್ತಿ



ಮಂಗಳೂರು: ಅರೆಹೊಳೆ ಪ್ರತಿಷ್ಠಾನ ಕಳೆದ ನಾಲ್ಕು ವರ್ಷಗಳಿಂದ ಪ್ರತಿವರ್ಷ ನೀಡುವ ರಾಜ್ಯ ಮಟ್ಟದ ಅರೆಹೊಳೆ ರಂಗಭೂಮಿಯ 2019ನೇ ಸಾಲಿನ ಪ್ರಶಸ್ತಿಗೆ ಪಾದುವಾ ಕಾಲೇಜು ಪ್ರಾಂಶುಪಾಲ, ರಂಗಕರ್ಮಿ ಆಲ್ವಿನ್ ಸೆರಾವೋ ಅವರನ್ನು ಆಯ್ಕೆ ಮಾಡಲಾಗಿದೆ.

ಈಗಾಗಲೇ ಅನೇಕ ಕೊಂಕಣಿ ನಾಟಕಗಳನ್ನು ರಚಿಸಿರುವ ಆಲ್ವಿನ್ ಸೆರಾವೋ, ಪಾದುವಾ ಕಾಲೇಜಿನಲ್ಲಿ ಪಾದುವಾ ರಂಗ ಅಧ್ಯಯನ ಕೇಂದ್ರದ ಮೂಲಕ ವಿದ್ಯಾರ್ಥಿಗಳಿಗೆ ನಿರಂತರ ರಂಗ ಚಟುವಟಿಕೆ ಹಮ್ಮಿಕೊಂಡು ರಂಗ ಶಿಕ್ಷಣ ನೀಡುತ್ತಿದ್ದಾರೆ. ಕನ್ನಡ, ಕೊಂಕಣಿ, ತುಳು ಹೀಗೆ ಎಲ್ಲ ಭಾಷೆಯ ನಾಟಕಗಳನ್ನು ಪ್ರಯೋಗಿಸವುದಕ್ಕೆ ವೇದಿಕೆ ಕಲ್ಪಿಸುವ ನುರಿತ ಸಂಘಟಕರಾಗಿ, ಮಂಗಳೂರಿನ ಮಟ್ಟಿಗೆ ಇಲ್ಲವಾದ ರಂಗಭೂಮಿಯ ಕೊರತೆಯನ್ನು ಪಾದುವಾ ಥಿಯೇಟರ್ ಹಬ್ ಎಂಬ ಸಮಾನ ಮನಸ್ಕ ಸಂಘಟಕರನ್ನು ಸೇರಿಸಿ, ವಾರಾಂತ್ಯದಲ್ಲಿ ನಾಟಕಗಳನ್ನು ಪ್ರದರ್ಶಿಸುವುದರ ಮೂಲಕ ರಾಜ್ಯಕ್ಕೆ ಮಾದರಿ ಎಂಬ ಕೆಲಸ ಮಾಡುತ್ತಿದ್ದಾರೆ. ಲೋಗೋಸ್ ಥಿಯೇಟರ್ ಗ್ರೂಪ್ ಎಂಬ ರಂಗ ಸಂಘಟನೆ ಆರಂಭಿಸುವ ಮೂಲಕ ಅನೇಕ ಹೊಸ ರೀತಿಯ ಕೊಂಕಣಿ ನಾಟಕಗಳನ್ನು ನಿರ್ಮಿಸಿ ಪ್ರದರ್ಶಿಸಿದ ಇವರು ಬೇರೆ ಬೇರೆ ತಂಡ, ಸಂಘಟಕರಿಗೂ ವೇದಿಕೆ ಕಲ್ಪಿಸುವ ಮೂಲಕ ರಂಗಭೂಮಿಗೆ ವಿಶೇಷ ಕೊಡುಗೆ ನೀಡುತ್ತಿದ್ದಾರೆ.

ನಾಟಕಕಾರ, ಸಂಘಟಕ, ರಂಗಕರ್ಮಿಯಾಗಿ ಪಾದುವಾ ಕಾಲೇಜನ್ನು ಜಿಲ್ಲೆಯ ರಂಗ ಕೇಂದ್ರವನ್ನಾಗಿ ನಿರ್ಮಿಸಿದ ಅವರ ಒಟ್ಟು ಸಾಧನೆ ಗುರುತಿಸಿ ಪ್ರಶಸ್ತಿಯನ್ನು ಡಿ.15ರಂದು ಪಾದುವಾ ಕಾಲೇಜಿನ ಬಯಲು ರಂಗಮಂದಿರದಲ್ಲಿ ನಡೆಯಲಿರುವ ಅರೆಹೊಳೆ ರಂಗ ಹಬ್ಬದ ಮೂರನೆಯ ದಿನ ಪ್ರದಾನಿಸಲಾಗುವುದು ಎಂದು ಅರೆಹೊಳೆ ಪ್ರತಿಷ್ಠಾನದ ಗೌರವಾಧ್ಯಕ್ಷ ಹರಿಕೃಷ್ಣ ಪುನರೂರು ತಿಳಿಸಿದ್ದಾರೆ.

Scanned with CamScanner

# ವಂ| ಆಲ್ವಿನ್ ಸೆರಾವೋ ಅವರಿಗೆ 'ಅರೆಹೊಳೆ ರಂಗಭೂಮಿ ಪ್ರಶಸ್ತಿ'



ಮಹಾನಗರ: ಅರೆಹೊಳೆ ಪ್ರತಿಷ್ಠಾನವು ಕಳೆದ ನಾಲ್ಕು ವರ್ಷಗಳಿಂದ ಪ್ರತೀ ವರ್ಷ ನೀಡುವ ರಾಜ್ಯ ಮಟ್ಟದ ಅರೆಹೊಳೆ ರಂಗಭೂಮಿಯ 2019ನೇ ಸಾಲಿನ ಪ್ರಶಸ್ತಿಗೆ ಪಾದುವ ಕಾಲೇಜಿನ ಪ್ರಾಂಶುಪಾಲ, ರಂಗಕರ್ಮಿ ವಂ| ಆಲ್ವಿನ್ ಸೆರಾವೋ ಅವರನ್ನು ಆಯ್ಕೆ ಮಾಡಲಾಗಿದೆ. ಈಗಾಗಲೇ ಅನೇಕ ಕೊಂಕಣಿ ನಾಟಕಗಳನ್ನು ರಚಿಸಿರುವ ವಂ| ಆಲ್ವಿನ್ ಸೆರಾ ವೋ ಅವರು ಪಾದುವ ಕಾಲೇಜಿನಲ್ಲಿ ಪಾದುವ ರಂಗ ಅಧ್ಯಯನ ಕೇಂದ್ರದ ಮೂಲಕ ವಿದ್ಯಾರ್ಥಿಗಳಿಗೆ ನಿರಂತರ ರಂಗ ಚಟು ವಟಿಕೆಗಳನ್ನು ಹಮ್ಮಿಕೊಂಡು ರಂಗ ಶಿಕ್ಷಣ ನೀಡುತ್ತಿದ್ದಾರೆ. ಈ ವರ್ಷದ ಅರೆಹೊಳೆ ರಂಗಭೂಮಿ ಪ್ರಶಸ್ತಿಯನ್ನು ದಿನಾಂಕ ಡಿ. 15ರಂದು ಪಾದುವ ಕಾಲೇಜಿನ ಬಯಲು ರಂಗಮಂದಿರದಲ್ಲಿ ನಡೆಯಲಿರುವ ಅರೆಹೊಳೆ ರಂಗ ಹಬ್ಬದ ಮೂರನೇ ದಿನ ಪ್ರದಾನಿಸಲಾಗುವುದು. ಇದುವರೆಗೆ ಈ ಪ್ರಶಸ್ತಿಯನ್ನು ಸುಳ್ಯದ ರಂಗ ಮನೆಯ ಜೀವನರಾಂ ಸುಳ್ಯ, ರಂಗಾಯಣದ ಪ್ರಮೀಳಾ ಬೇಂಗ್ರೆ ಹಾಗೂ ನೀನಾಸಂನ ಬಿ ಆರ್ ವೆಂಕಟರಮಣ ಐತಾಳರಿಗೆ ನೀಡ ಲಾಗಿತ್ತು. ಪ್ರಶಸ್ತಿ 10,000 ರೂ. ನಗದು ಮೊತ್ತ ಹಾಗೂ ಫಲಕಗಳನ್ನು ಒಳಗೊಂಡಿದೆ ಎಂದು ಅರೆಹೊಳೆ ಪ್ರತಿಷ್ಠಾನದ ಗೌರವಾ ಧ್ಯಕ್ಷ ಹರಿಕೃಷ್ಣ ಪುನರೂರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

Scanned with CamScanner

# ವಂ| ಆಲ್ವಿನ್ ಸೆರಾವೋ ಅವರಿಗೆ 'ಅರೆಹೊಳೆ ರಂಗಭೂಮಿ ಪ್ರಶಸ್ತಿ'



ಮಹಾನಗರ: ಅರೆಹೊಳೆ ಪ್ರತಿಷ್ಠಾನವು ಕಳೆದ ನಾಲ್ಕು ವರ್ಷಗಳಿಂದ ಪ್ರತೀ ವರ್ಷ ನೀಡುವ ರಾಜ್ಯ ಮಟ್ಟದ ಅರೆಹೊಳೆ ರಂಗಭೂಮಿಯು 2019ನೇ ಸಾಲಿನ ಪ್ರಶಸ್ತಿಗೆ ಪಾದುವ ಕಾಲೇಜಿನ ಪ್ರಾಂಶುಪಾಲ, ರಂಗಕರ್ಮಿ ವಂ| ಆಲ್ವಿನ್ ಸೆರಾವೋ ಅವರನ್ನು ಆಯ್ಕೆ ಮಾಡಲಾಗಿದೆ. ಈಗಾಗಲೇ ಅನೇಕ ಕೊಂಕಣಿ ನಾಟಕಗಳನ್ನು ರಚಿಸಿರುವ ವಂ| ಆಲ್ವಿನ್ ಸೆರಾ ವೋ ಅವರು ಪಾದುವ ಕಾಲೇಜಿನಲ್ಲಿ ಪಾದುವ ರಂಗ ಅಧ್ಯಯನ ಕೇಂದ್ರದ ಮೂಲಕ ವಿದ್ಯಾರ್ಥಿಗಳಿಗೆ ನಿರಂತರ ರಂಗ ಚಟು ವಟಿಕೆಗಳನ್ನು ಹಮ್ಮಿಕೊಂಡು ರಂಗ ಶಿಕ್ಷಣ ನೀಡುತ್ತಿದ್ದಾರೆ. ಈ ವರ್ಷದ ಅರೆಹೊಳೆ ರಂಗಭೂಮಿ ಪ್ರಶಸ್ತಿಯನ್ನು ದಿನಾಂಕ ಡಿ. 15ರಂದು ಪಾದುವ ಕಾಲೇಜಿನ ಬಯಲು ರಂಗಮಂದಿರದಲ್ಲಿ ನಡೆಯಲಿರುವ ಅರೆಹೊಳೆ ರಂಗ ಹಬ್ಬದ ಮೂರನೇ ದಿನ ಪ್ರದಾನಿಸಲಾಗುವುದು. ಇದುವರೆಗೆ ಈ ಪ್ರಶಸ್ತಿಯನ್ನು ಸುಳ್ಯದ ರಂಗ ಮನೆಯ ಜೀವನರಾಂ ಸುಳ್ಯ, ರಂಗಾಯಣದ ಪ್ರಮೀಳಾ ಬೇಂಗ್ರೆ ಹಾಗೂ ನೀನಾಸಂನ ಬಿ ಆರ್ ವೆಂಕಟರಮಣ ಐತಾಳರಿಗೆ ನೀಡ ಲಾಗಿತ್ತು. ಪ್ರಶಸ್ತಿ 10,000 ರೂ. ನಗದು ಮೊತ್ತ ಹಾಗೂ ಫಲಕಗಳನ್ನು ಒಳಗೊಂಡಿದೆ ಎಂದು ಅರೆಹೊಳೆ ಪ್ರತಿಷ್ಠಾನದ ಗೌರವಾಧ್ಯಕ್ಷ ಹರಿಕೃಷ್ಣ ಪುನರೂರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

Scanned with CamScanner

# ರೆ.ಫಾ.ಆಲ್ವಿನ್ ಸೆರಾವ್ರೋಗೆ ಅರೆಹೊಳೆ ರಂಗ ಭೂಮಿ ಪ್ರಶಸ್ತಿ



ಪಾದುವಾ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿರುವ ರೆ.ಫಾ.ಆಲ್ವಿನ್ ಸೆರಾವೋ ರಂಗಭೂಮಿಯಲ್ಲಿ ವಿನೂತನ ಸಾಧ್ಯತೆಯನ್ನು ತೆರೆದಿಟ್ಟಿರುವ ಸಾಧಕ.

ಇವರು ಅಪ್ಪಟ ರಂಗ ಪ್ರೇಮಿಯಾಗಿ, ರಂಗಕರ್ಮಿಯಾಗಿ ಗುರುತಿಸಿಕೊಂಡಿದ್ದಾರೆ. ಇದುವರೆಗೆ ಏಳು ಇಂಗ್ಲಿಷ್ ನಾಟಕಗಳನ್ನು ಕೊಂಕಣಿಗೆ ಅನುವಾದಿಸಿರುವ ಇವರು ಪೆದ್ರು, ಝೂರಝ್, ಮಗ್ದಲಾಚಿ ಮೊರಿ, ಸಳ್ಗಿ ಹಾಗೂ ವಿನೋಸ್ಲಿನ್ ಕೊಣಾಚಿ ಎಂಬ ಐದು ಕೊಂಕಣಿ ನಾಟಕಗಳನ್ನು ರಚಿಸಿದ್ದಾರೆ. ಇವರ ನೇತೃತ್ವದಲ್ಲಿ ಕೊಂಕಣಿ, ತುಳು ಹಾಗೂ ಕನ್ನಡದಲ್ಲಿ ಒಟ್ಟು 12 ನಾಟಕಗಳು ನಿರ್ಮಾಣವಾಗಿವೆ.

ಫಾದರ್ ಸೆರಾವೋ ನಾಟಕ ರಚನೆ ಮಾತ್ರವಲ್ಲದೆ ರಂಗಭೂಮಿಯ ಇತರ ಚಟುವಟಿಕೆಗಳಿಗೆ ನಿರಂತರ ಪ್ರೋತ್ಸಾಹ ನೀಡುತ್ತಿರುವ ಓರ್ವ ಸಂಘಟಕರಾಗಿಯೂ ಗುರುತಿಸಿಕೊಂಡಿದ್ದಾರೆ. ಪಾದುವಾ ಕಾಲೇಜಿನಲ್ಲಿ ರಂಗ ಅಧ್ಯಯನ ಕೇಂದ್ರವನ್ನು ಆರಂಭಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ರಂಗಾಸಕ್ತಿಯನ್ನು ಬೆಳೆಸಿ, ಆ ಮೂಲಕ ರಂಗಭೂಮಿಯ ಎಲ್ಲಾ ಕ್ಷೇತ್ರಗಳಲ್ಲೂ ಪರಿಣಿತ ಕಲಾವಿದರನ್ನು ಅಣಿಗೊಳಿಸುತ್ತಿದ್ದಾರೆ. ಇತ್ತೀಚೆಗೆ ಮಾಸ್ಟರೇಟ್ ಎನ್ನುವ ರಂಗ ತರಬೇತಿ ಶಿಬಿರದ ಮೂಲಕ ಒಂದು ವರ್ಷದ ಡಿಪ್ಲೋಮಾ ಪದವಿ ನೀಡುವ ರಂಗ ತರಬೇತಿಗಳನ್ನು 100 ದಿನಗಳಲ್ಲಿ ನೀಡುವ ಮೂಲಕ ಮಂಗಳೂರಿನಲ್ಲಿ ಒಂದು ರಂಗತಂಡವನ್ನೇ ನಿರ್ಮಿಸಿದ್ದಾರೆ. ಮಲಯಾಳಂನ ಖ್ಯಾತ ರಂಗನಿರ್ದೇಶಕ ಅರುಣ್ ಲಾಲ್ ನಿರ್ದೇಶನದಲ್ಲಿ ಕೆಂಡೋನಿಯನ್ಸ್ ಎಂಬ ನಾಟಕವನ್ನೂ ನಿರ್ಮಿಸಿದ್ದು ಇದು ಯಶಸ್ವೀ ಪ್ರದರ್ಶನಗಳನ್ನು ನೀಡುತ್ತಿದೆ.

ಇತ್ತೀಚೆಗೆ ರಾಜ್ಯಾದ್ಯಂತ ಸುದ್ದಿ ಮಾಡಿದ್ದು ಮಂಗಳೂರಿನ ಪಾದುವಾ ಥಿಯೇಟರ್ ಹಬ್. ಅಕ್ಟೋಬರ್‌ನಿಂದ ಪ್ರತಿ ಶನಿವಾರದಂದು ಒಂದೊಂದು ನಾಟಕವನ್ನು ಪ್ರದರ್ಶಿಸುವ ಮೂಲಕ ಇದು ರಾಜ್ಯದ ಗಮನ ಸೆಳೆದಿದೆ. ಲೋಗೋಸ್ ಥಿಯೇಟರ್ ಗ್ರೂಪ್ ಎಂಬ ಸಂಸ್ಥೆಯನ್ನು ಹುಟ್ಟು ಹಾಕಿ, ಬಹುಭಾಷಾ ರಂಗ ಹಬ್ಬವನ್ನೂ ಆಯೋಜಿಸುತ್ತಾ, ರಂಗಭೂಮಿಗೆ ಭಾಷೆಗಿಂತಲೂ ರಂಗಭೂಮಿಯೇ ಒಂದು ಭಾಷೆ ಎಂಬ ನೆಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಇವರ ಈ ಸಾಧನೆಗಳನ್ನು ಗುರುತಿಸಿ, 2019ನೇ ಸಾಲಿನ ಅರೆಹೊಳೆ ರಂಗಭೂಮಿ ಪ್ರಶಸ್ತಿಯನ್ನು ಡಿ. 15ರಂದು ಪಾದುವಾ ಕಾಲೇಜಿನಲ್ಲಿ ನಡೆದ ಹಿರಿಯ ರಂಗಕರ್ಮಿ ಸದಾನಂದ ಸುವರ್ಣ ಗೌರವಾರ್ಥ ರಂಗ ಹಬ್ಬದಲ್ಲಿ ಪ್ರದಾನಿಸಲಾಗಿದೆ.

Scanned with CamScanner

# 'ರಂಗಭೂಮಿಗೆ ಭಾಷೆ, ಜಾತಿ, ಮತದ ಹಂಗಿಲ್ಲ'



ವಂ। ಆಲ್ವಿನ್ ಸೆರಾವೋ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

**ಮಹಾನಗರ,** ಡಿ. 18: ರಂಗಭೂಮಿಯ ಮೂಲಕ ಜಗತ್ತಿಗೇ ಪ್ರೀತಿಯ ಸಂದೇಶವನ್ನು ಹರಡಬಹುದು. ಇಲ್ಲಿ ಯಾವುದೇ ಭಾಷೆ, ಜಾತಿ, ಮತದ ಹಂಗಿಲ್ಲದೇ ಜನಪ್ರೀತಿಯೊಂದನ್ನೇ ಪ್ರಮುಖವಾಗಿ ಪಸರಿಸಬಹುದು ಎಂಬುದನ್ನು ಪಾದುವಾ ಕಾಲೇಜಿನ ಪ್ರಾಂಶುಪಾಲ ವಂ। ಆಲ್ವಿನ್ ಸೆರಾವೋ ನಿರೂಪಿಸಿದ್ದಾರೆ ಎಂದು ಹಿರಿಯ ರಂಗಕರ್ಮಿ ಐ.ಕೆ. ಬೊಳುವಾರು ಹೇಳಿದರು.

ರಂಗಭೂಮಿಯಲ್ಲಿ ಸಲ್ಲಿಸಿದ ಸೇವೆಗಾಗಿ ಪಾದುವ ಕಾಲೇಜಿನ ಪ್ರಾಂಶುಪಾಲ ವಂ। ಆಲ್ವಿನ್ ಸೆರಾವೋ ಅವರಿಗೆ 2019ನೇ ಸಾಲಿನ ರಾಜ್ಯಮಟ್ಟದ ಅರೆಹೊಳೆ ರಂಗಭೂಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅಭಿನಂದನ ಮಾತುಗಳನ್ನಾಡುತ್ತಾ ಹೇಳಿದರು.

CS Scanned with CamScanner

ರಂಗಮಂದಿರದಲ್ಲಿ ನಡೆಯುತ್ತಿರುವ, ಅರೆಹೊಳೆ ಪ್ರತಿಷ್ಠಾನ, ಪಾದುವ ರಂಗ ಅಧ್ಯಯನ ಕೇಂದ್ರ ಹಾಗೂ ಅಸ್ತಿತ್ವ ಸಂಸ್ಥೆಗಳು ಜಂಟಿಯಾಗಿ ಆಯೋಜಿಸಿರುವ, ಹಿರಿಯ ರಂಗಕರ್ಮಿ ಸದಾನಂದ ಸುವರ್ಣ ಅವರ ಗೌರವಾರ್ಥದ ಅರೆಹೊಳೆ ರಂಗ ಹಬ್ಬದ ಮೂರನೆಯ ದಿನ ವಂ। ಆಲ್ವಿನ್ ಸೆರಾವೋ ಅವರಿಗೆ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ರಂಗಪ್ರೀತಿಗೆ ತಮ್ಮ ಬೆನ್ನೆಲುಬಾಗಿ ನಿಂತ ವಿದ್ಯಾರ್ಥಿ ವೃಂದ, ರಂಗಾಸಕ್ತರ ಪಾಲಿಗೆ ಸಂದ ಪ್ರಶಸ್ತಿ ಇದಾಗಿದ್ದು, ಇದಕ್ಕೆ ತಾನು ನಿಮಿತ್ತ ಮಾತ್ರ ಎಂದರು.

ಅಧ್ಯಕ್ಷತೆ ವಹಿಸಿದ್ದ ಕೆ.ಸಿ. ಪ್ರಭು, ಇಂತಹ ಪ್ರಶಸ್ತಿಗಳ ಮೂಲಕ, ನಿಸ್ವಾರ್ಥ ಸೇವೆ ಮಾಡುವ ಸಾಧಕರಿಗೆ ಮತ್ತಷ್ಟು ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದರು.

ಆಯನ ನಾಟಕದ ಮನೆಯ ಮೋಹನ್ ಚಂದ್ರ ಯು., ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯ ಜೋಸೆಫ್ ನೀನಾಸಂ, ರಂಗಕರ್ಮಿ ಕ್ರಿಸ್ಟೋಫರ್ ನೀನಾಸಂ, ಜೇಸಿಐ ಲಾಲ್‌ಬಾಗ್ ಅಧ್ಯಕ್ಷ ಪ್ರೀತಮ್ ಪ್ರಿನ್ಸ್ ಪಿಂಟೋ, ಫಾ। ಆಲ್ವಿನ್ ಸೆರಾವೋ ಅವರ ತಂದೆ-ತಾಯಿ ಹಾಗೂ ಸಹೋದರ, ಅರೆಹೊಳೆ ಪ್ರತಿಷ್ಠಾನದ ಉಪಾಧ್ಯಕ್ಷೆ ಗೀತಾ ಅರೆಹೊಳೆ ಉಪಸ್ಥಿತರಿದ್ದರು.

ಅರೆಹೊಳೆ ಸದಾಶಿವ ರಾವ್ ಸ್ವಾಗತಿಸಿ, ವಿಶಾಲಾಕ್ಷಿ ರಾವ್ ವಂದಿಸಿದರು. ಶ್ವೇತಾ ಅರೆಹೊಳೆ, ಪೃಥ್ವಿ ರಾವ್ ನಿರೂಪಿಸಿದರು. ಅನಂತರ ಪಾದುವಾ ರಂಗ ಅಧ್ಯಯನ ಕೇಂದ್ರದ ಮಸ್ಕರೇಡ್ ಶಿಬಿರಾರ್ಥಿಗಳಿಂದ ಕೇರಳದ ನಿರ್ದೇಶಕ ಅರುಣ್ ಲಾಲ್ ನಿರ್ದೇಶನದ ತುಳು ನಾಟಕ ಕೆಂಡೋನಿಯನ್ ಪ್ರದರ್ಶನಗೊಂಡಿತು.

# ಶಾರದಾ ಮಣಿಶೇಖರ್‌ಗೆ ಪುರಸ್ಕಾರ



**ವಿಕ ಸುದ್ದಿಲೋಕ** ಮಂಗಳೂರು

ಕಲಾವಿದರ ಸಾಧನೆ ಗುರುತಿಸಿ ಗೌರವಿಸುವುದೂ ಕಲಾ ಪೋಷಣೆಯಲ್ಲಿ ಮುಖ್ಯ ಕೆಲಸವಾಗಿದ್ದು ಸ್ವತಃ ಕಲಾ ತಂಡಗಳಾಗಿದ್ದೂ ಬೇರೆ ಕಲಾವಿದೆಯನ್ನೂ ಗುರುತಿಸುವ ಕೆಲಸವನ್ನು ಅರೆಹೊಳೆ ಪ್ರತಿಷ್ಠಾನ ಮತ್ತು ಗಾನ ನೃತ್ಯ ಅಕಾಡೆಮಿಗಳು ಮಾಡುತ್ತಿರುವುದು ಮಾದರಿ ಎಂದು ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ರಾಜ್ಯಾಧ್ಯಕ್ಷ ಹರಿಕೃಷ್ಣ ಪುನರೂರು ಹೇಳಿದರು.

ಅರೆಹೊಳೆ ಪ್ರತಿಷ್ಠಾನ, ಗಾನ ನೃತ್ಯ ಅಕಾಡೆಮಿಗಳ ಆಶ್ರಯದಲ್ಲಿ ನಡೆದ ವಾರ್ಷಿಕ ನೃತ್ಯ ಕಾರ್ಯಕ್ರಮ 'ನೃತ್ಯ ವರ್ಷಾ-2019ರಲ್ಲಿ ನೃತ್ಯ ಗುರು ವಿದುಷಿ ಶಾರದಾ ಮಣಿಶೇಖರ್ ಅವರಿಗೆ ನಂದಗೋಕುಲ ಕಲಾ ಪುರಸ್ಕಾರ ಪ್ರದಾನಿಸಿ ಮಾತನಾಡಿದರು.

ಗಾನ ನೃತ್ಯ ಅಕಾಡೆಮಿಯ ನಿರ್ದೇಶಕಿ ವಿದ್ಯಾಶ್ರೀ ರಾಧಾಕೃಷ್ಣ ಅಭಿನಂದನಾ ಭಾಷಣ ಮಾಡಿದರು. ಪಾದುವಾ ರಂಗ ಅಧ್ಯಯನ ಕೇಂದ್ರ ಹಾಗೂ ಅಸ್ತಿತ್ವ ಸಂಸ್ಥೆಗಳ ಸಹಯೋಗದೊಂದಿಗೆ ಏಳು ದಿನಗಳ ಕಾಲ ಪಾದುವಾ ರಂಗ ಮಂದಿರದಲ್ಲಿ, ಹಿರಿಯ ರಂಗ ಕರ್ಮಿ ಸದಾನಂದ ಸುವರ್ಣ ಗೌರವಾರ್ಥ ನಡೆಯುತ್ತಿರುವ ಅರೆಹೊಳೆ ರಂಗ ಹಬ್ಬದ ಮೊದಲ ದಿನವಾಗಿ ನೃತ್ಯವರ್ಷಾ ನಡೆಯಿತು. ರಂಗಕರ್ಮಿ, ಪಾದುವಾ ಕಾಲೇಜಿನ ಪ್ರಿನ್ಸಿಪಾಲ್ ಫಾ.ಅಲ್ವಿನ್ ಸೆರಾವೋ, ಮಂಗಳೂರು ಮಹಾನಗರಪಾಲಿಕೆಯ ಸದಸ್ಯೆ ಸುಮಂಗಳಾ ರಾವ್, ಅರೆಹೊಳೆ ಪ್ರತಿಷ್ಠಾನದ ಗೌರವ ಸಲಹೆಗಾರ ಕೆ.ಸಿ. ಪ್ರಭು, ಅರೆಹೊಳೆ ಪ್ರತಿಷ್ಠಾನದ ಉಪಾಧ್ಯಕ್ಷೆ ಗೀತಾ ಅರೆಹೊಳೆ, ಸನಾತನ ನಾಟ್ಯಾಲಯದ ಚಂದ್ರಶೇಖರ್ ಶೆಟ್ಟಿ ಹಾಗೂ ರಂಗ ಕರ್ಮಿ ಸದಾನಂದ ಸುವರ್ಣ ಉಪಸ್ಥಿತರಿದ್ದರು.

ಅರೆಹೊಳೆ ಸದಾಶಿವ ರಾವ್ ಸ್ವಾಗತಿಸಿದರು. ಗಾನ ನೃತ್ಯ ಅಕಾಡೆಮಿ ಕಾರ್ಯದರ್ಶಿ ರಾಧಾಕೃಷ್ಣ ಭಟ್ ವಂದಿಸಿದರು. ಮಾಧುರಿ ಶ್ರೀರಾಂ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮ ಬಳಿಕ ಗಾನ ನೃತ್ಯ ಅಕಾಡೆಮಿಯ ವಿದ್ಯಾರ್ಥಿನಿಯರಿಂದ ವಿದ್ಯಾಶ್ರೀ ರಾಧಾಕೃಷ್ಣ ನಿರ್ದೇಶನದಲ್ಲಿ ನೃತ್ಯ ವೈಭವ ಹಾಗೂ ದಶಾವತಾರ ನೃತ್ಯ ಪ್ರಸ್ತುತಿ ನಡೆಯಿತು.

Scanned with CamScanner

ವಿಜಯ ಕರ್ನಾಟಕ

# ರಂಗ ಪ್ರೇಮಿ ಫಾ. ಆಲ್ವಿನ್ ಸೆರಾವ್ರೋಗೆ ಅರೆಹೊಳೆ ರಂಗಭೂಮಿ ಪ್ರಶಸ್ತಿ

ಕಳೆದ ಐದು ವರ್ಷಗಳಿಂದ ಅರೆಹೊಳೆ ಪ್ರತಿಷ್ಠಾನ ನೀಡುವ ರಾಜ್ಯಮಟ್ಟದ ಅರೆಹೊಳೆ ರಂಗಭೂಮಿ ಪ್ರಶಸ್ತಿ, ಈ ಸಲ ಮಂಗಳೂರು ರಂಗಭೂಮಿಯಲ್ಲಿ ವಿನೂತನ ಶಕೆಯೊಂದಕ್ಕೆ ಕಾರಣರಾದ ಪಾದುವಾ ಕಾಲೇಜಿನ ಪ್ರಾಂಶುಪಾಲ ಫಾ.ಆಲ್ವಿನ್ ಸೆರಾವ್ರೋ ಅವರನ್ನು ಅರಸಿಬಂದಿದೆ.

**ಡಿ.15ರಂದು ಪ್ರಶಸ್ತಿ ಪ್ರದಾನ**



ಏಳು ಇಂಗ್ಲಿಷ್ ನಾಟಕಗಳನ್ನು ಕೊಂಕಣಿಗೆ ಅನುವಾದಿಸಿ, ಐದು ಕೊಂಕಣಿ ನಾಟಕಗಳನ್ನು ಸ್ವತಃ ರಚಿಸಿರುವ ಫಾದರ್ ತಮ್ಮದೇ ಕಾಲೇಜಿನಲ್ಲಿ ಪಾದುವಾ ರಂಗ ಅಧ್ಯಯನ ಕೇಂದ್ರ ಸ್ಥಾಪಿಸಿ, ಅನೇಕ ಯುವ ಪ್ರತಿಭೆಗಳಲ್ಲಿ ರಂಗಾಸಕ್ತಿ ಮೂಡಿಸಿ, ರಂಗ ನಿರ್ದೇಶನ, ಬೆಳಕು, ಪರಿಕರ, ಸಂಘಟನೆ...ಹೀಗೆ ಎಲ್ಲಾ ವಿಭಾಗಗಳಲ್ಲೂ ವಿದ್ಯಾರ್ಥಿಗಳನ್ನು ಅಣಿಗೊಳಿಸುತ್ತಿದ್ದಾರೆ. ನಾಟಕ ರಚನೆಯೊಂದಿಗೆ ಅನೇಕ ನಾಟಕಗಳ ನಿರ್ಮಾಣದ ವನ್ನು ಮಾಡಿದ್ದು, ಇವರ ನೇತೃತ್ವದ ಎರಡು ಕೊಂಕಣಿ ನಾಟಕಗಳು ಇತ್ತೀಚೆಗೆ ಶಾರ್ಜಾದಲ್ಲೂ ಪ್ರದರ್ಶನ ನೀಡಿ ಮೆಚ್ಚುಗೆ ಗಳಿಸಿವೆ.

ಪಾದುವಾ ಕಾಲೇಜಿನಲ್ಲಿ ನೂರು ದಿನಗಳ ರಂಗ ತರಬೇತಿ ಶಿಬಿರ, ಮಸ್ಕರೇಡ್‌ನ್ನು ಹಮ್ಮಿಕೊಂಡು ಒಂದಿಡೀ ವರ್ಷ ನೀಡಬಹುದಾದ ತರಬೇತಿಗಳನ್ನು ನೀಡಿ, ಮಲಯಾಳಂ ನಿರ್ದೇಶಕ ಅರುಣ್ ಲಾಲ್ ಅವರ ನಿರ್ದೇಶನದಲ್ಲಿ ಈ ಶಿಬಿರಾರ್ಥಿಗಳಿಗೆ ಕೆಂಡೋನಿಯನ್ಸ್ ಎಂಬ ನಾಟಕ ನಿರ್ಮಾಣವನ್ನೂ ಮಾಡಿದ್ದಾರೆ. ಇದು ಅತ್ಯಂತ ಯಶಸ್ವೀ ಪ್ರದರ್ಶನಗಳನ್ನು ನೀಡುತ್ತಿರುವುದೇ ಅಲ್ಲದೇ, ಒಂದು ಹೊಸ ರಂಗ ತಂಡದ ಉದಯಕ್ಕೂ ಕಾರಣವಾಗಿದೆ.

ಮಂಗಳೂರು ರಂಗ ಭೂಮಿಯನ್ನು ಇಡೀ ರಾಜ್ಯವೇ ಗಮನಿಸುವಂತೆ ಮಾಡಿದ ಪಾದುವಾ ಥಿಯೇಟರ್ ಹಬ್ ಸ್ಥಾಪಿಸುವಲ್ಲಿ ಇವರ ಪಾತ್ರ ದೊಡ್ಡದು. ಅನೇಕ ಸಮಾನಾಸಕ್ತ ಸಂಘಟನೆಗಳೊಂದಿಗೆ ಪಾದುವಾ ಥಿಯೇಟರ್ ಹಬ್ ಸ್ಥಾಪಿಸಿ, ಪ್ರತೀ ಶನಿವಾರ ನಾಟಕ ಪ್ರದರ್ಶನ ಆಯೋಜಿಸುವ ಮೂಲಕ ಹೊಸ ಸಾಧ್ಯತೆಗೂ ಕಾರಣರಾಗಿದ್ದಾರೆ. ಸದ್ಯ ಡಿಸೆಂಬರ್ ಕೊನೆಯ ತನಕ ಪ್ರದರ್ಶನಗಳು ನಿರಂತರವಾಗಿ ನಡೆಯಲಿವೆ.

ಹೀಗೆ ಭಾಷಾತೀತವಾಗಿ ರಂಗ ಪ್ರೀತಿ, ನಿರಂತರ ಕ್ರಿಯಾಶೀಲತೆ, ಶಿಕ್ಷಣದಲ್ಲಿ ರಂಗಾಸಕ್ತಿನ್ನು ಬೆಳೆಸುವ ಆಸಕ್ತಿ, ಸಂಘಟನಾ ಚತುರತೆ, ಎಲ್ಲವನ್ನೂ ಗುರುತಿಸಿ ಇವರಿಗೆ ಅರೆಹೊಳೆ ರಂಗಭೂಮಿ ಪ್ರಶಸ್ತಿ ಅರಸಿ ಬಂದಿದ್ದು, ಇದೇ ಡಿ.15ರಂದು ಅರೆಹೊಳೆ ರಂಗಹಬ್ಬದಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

■ ಅಸರಾ

Scanned with CamScanner

## ರಂಗಕರ್ಮಿ ಐ.ಕೆ.ಬೊಳುವಾರು ಅಭಿಮತ | ಫಾ.ಆಲ್ವಿನ್ ಸೆರಾವೊಗೆ ಪ್ರಶಸ್ತಿ

# ರಂಗಭೂಮಿಯಿಂದ ಪ್ರೀತಿಯ ಸಂದೇಶ



ಪಾದುವಾ ಕಾಲೇಜು ಪ್ರಾಂಶುಪಾಲ ಫಾ.ಆಲ್ವಿನ್ ಸೆರಾವೊ ಅವರಿಗೆ 2019ನೇ ಸಾಲಿನ ರಾಜ್ಯಮಟ್ಟದ ಅರೆಹೊಳೆ ರಂಗಭೂಮಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಹಿರಿಯ ರಂಗ ಕರ್ಮಿ ಐ.ಕೆ.ಬೊಳುವಾರು , ಕೆ.ಸಿ.ಪ್ರಭು , ಆಯನ ನಾಟಕದ ಮನೆಯ ಮೋಹನ್ ಚಂದ್ರ ಯು, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ಜೋಸೆಫ್ ನೀನಾಸಂ, ರಂಗಕರ್ಮಿ ಕ್ರಿಸ್ಟೋಫರ್ ನೀನಾಸಂ, ಜೇಸಿಐ ಲಾಲ್‌ಬಾಗ್ ಅಧ್ಯಕ್ಷ ಪ್ರೀತಮ್ ಪ್ರಿನ್ಸ್ ಪಿಂಟೊ, ಅರೆಹೊಳೆ ಪ್ರತಿಷ್ಠಾನದ ಉಪಾಧ್ಯಕ್ಷೆ ಗೀತಾ ಅರೆಹೊಳೆ, ಸಂಘಟಕ ಅರೆಹೊಳೆ ಸದಾಶಿವ ರಾವ್ ಮೊದಲಾದವರು ಉಪಸ್ಥಿತರಿದ್ದರು.

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ರಂಗಭೂಮಿಯ ಮೂಲಕ ಜಗತ್ತಿಗೆ ಪ್ರೀತಿಯ ಸಂದೇಶ ಹರಡಬಹುದು. ಇದಕ್ಕೆ ಭಾಷೆ, ಜಾತಿ ಮತದ ಹಂಗಿಲ್ಲ ಎಂದು ಹಿರಿಯ ರಂಗ ಕರ್ಮಿ ಐ.ಕೆ.ಬೊಳುವಾರು ಹೇಳಿದರು.

ಅರೆಹೊಳೆ ಪ್ರತಿಷ್ಠಾನ, ಪಾದುವಾ ರಂಗ ಅಧ್ಯಯನ ಕೇಂದ್ರ ಹಾಗೂ ಅಸ್ತಿತ್ವ ಸಂಸ್ಥೆಗಳ ವತಿಯಿಂದ ಹಿರಿಯ ರಂಗ ಕರ್ಮಿ ಸದಾನಂದ ಸುವರ್ಣ ಅವರ ಗೌರವಾರ್ಥ ಪಾದುವಾ ಕಾಲೇಜಿನ ಬಯಲು ರಂಗಮಂದಿರದಲ್ಲಿ ನಡೆದ ಅರೆಹೊಳೆ ರಂಗ ಹಬ್ಬದಲ್ಲಿ ಅವರು ಪಾದುವಾ ಕಾಲೇಜಿನ ಪ್ರಾಂಶುಪಾಲ ಫಾ.ಆಲ್ವಿನ್ ಸೆರಾವೊ ಅವರಿಗೆ 2019ನೇ ಸಾಲಿನ ರಾಜ್ಯಮಟ್ಟದ ಅರೆಹೊಳೆ ರಂಗಭೂಮಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕೆ.ಸಿ.ಪ್ರಭು ಮಾತನಾಡಿ, ಪ್ರಶಸ್ತಿಗಳ ಮೂಲಕ ನಿಸ್ವಾರ್ಥ ಸೇವೆ ಮಾಡುವ ಸಾಧಕರಿಗೆ ಮತ್ತಷ್ಟು ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದರು.

ಆಯನ ನಾಟಕದ ಮನೆಯ ಮೋಹನ್ ಚಂದ್ರ ಯು, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ಜೋಸೆಫ್ ನೀನಾಸಂ, ರಂಗಕರ್ಮಿ ಕ್ರಿಸ್ಟೋಫರ್ ನೀನಾಸಂ, ಜೇಸಿಐ ಲಾಲ್‌ಬಾಗ್ ಅಧ್ಯಕ್ಷ ಪ್ರೀತಮ್ ಪ್ರಿನ್ಸ್ ಪಿಂಟೊ, ಅರೆಹೊಳೆ ಪ್ರತಿಷ್ಠಾನದ ಉಪಾಧ್ಯಕ್ಷೆ ಗೀತಾ ಅರೆಹೊಳೆ ಉಪಸ್ಥಿತರಿದ್ದರು. ಅರೆಹೊಳೆ ಸದಾಶಿವ ರಾವ್ ಸ್ವಾಗತಿಸಿ, ವಿಶಾಲಾಕ್ಷಿ ರಾವ್ ವಂದಿಸಿದರು. ಶ್ವೇತಾ ಅರೆಹೊಳೆ, ಪ್ರಥ್ವಿ ರಾವ್ ಕಾರ್ಯಕ್ರಮ ನಿರೂಪಿಸಿದರು. ಬಳಿಕ ಪಾದುವಾ ರಂಗ ಅಧ್ಯಯನ ಕೇಂದ್ರದ ಮಸ್ಕರೇಡ್ ಶಿಬಿರಾರ್ಥಿಗಳಿಂದ ಕೇರಳದ ನಿರ್ದೇಶಕ ಅರುಣ್ ಲಾಲ್ ನಿರ್ದೇಶನದ ತುಳು ನಾಟಕ ಕೆಂಡೋನಿಯನ್ಸ್ ಪ್ರದರ್ಶನಗೊಂಡಿತು.

Scanned with CamScanner

'ಅರೆಹೊಳೆ ರಂಗನಡೆ 2020' ಉದ್ಘಾಟನೆ

# 'ರಂಗಭೂಮಿ ಕಲಾವಿದರ ಕಡೆಗಣನೆ'

ಪ್ರಜಾವಾಣಿ ವಾರ್ತೆ



ಅರೆಹೊಳೆ ಪ್ರತಿಷ್ಠಾನ ಈಚೆಗೆ ಹಮ್ಮಿಕೊಂಡಿದ್ದ 'ಅರೆಹೊಳೆ ರಂಗನಡೆ–2020' ಕಾರ್ಯಕ್ರಮಕ್ಕೆ ರಂಗಸಮಾಜದ ಸದಸ್ಯ ಜೀವನರಾಂ ಸುಳ್ಯ ಚಾಲನೆ ನೀಡಿದರು

ಮಂಗಳೂರು: ಬೇರೆಲ್ಲಾ ಲಲಿತಕಲಾ ಕ್ಷೇತ್ರಗಳಿಗೆ ಹೋಲಿಸಿದರೆ ರಂಗಭೂಮಿ ಕಲಾವಿದರು ಹೆಚ್ಚು ನಿರ್ಲಕ್ಷಿತರಾಗುತ್ತಿರುವುದು ಅತ್ಯಂತ ಬೇಸರದ ಸಂಗತಿ ಎಂದು ಹಿರಿಯ ರಂಗಕರ್ಮಿ ಹಾಗೂ ರಂಗಸಮಾಜದ ಸದಸ್ಯ ಜೀವನರಾಂ ಸುಳ್ಯ ವಿಷಾದಿಸಿದರು.

ಅರೆಹೊಳೆ ಪ್ರತಿಷ್ಠಾನವು ಪಾದುವಾ ರಂಗ ಅಧ್ಯಯನ ಕೇಂದ್ರ, ಅಸ್ತಿತ್ವ, ಲೋಗೋಸ್ ಥಿಯೇಟರ್ ಗ್ರೂಪ್ ಸಹಯೋಗದೊಂದಿಗೆ, ಪಾದುವಾ ಥಿಯೇಟರ್ ಹಬ್‌ನಲ್ಲಿ ಈಚೆಗೆ ಆಯೋಜಿಸಿದ್ದ 'ಅರೆಹೊಳೆ ರಂಗನಡೆ-2020' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ರಂಗಭೂಮಿ ಕಲಾವಿದರು ಎಂತಹ ಪರಿಸ್ಥಿತಿಯೊಂದಿಗೂ ರಾಜಿ ಮಾಡಿಕೊಂಡು ಉತ್ತಮ ಪ್ರದರ್ಶನ ನೀಡುತ್ತಿರುವುದು ಅವರ ಬದ್ಧತೆಯೇ ಹೊರತಾಗಿ ದೌರ್ಬಲ್ಯವಲ್ಲ ಎಂಬುದನ್ನು ನಾವೆಲ್ಲರೂ ಅರಿತುಕೊಳ್ಳಬೇಕು ಎಂದು ಅವರು ಹೇಳಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ರಂಗಕರ್ಮಿ ವಿಜಯ ಕುಮಾರ್ ಕೊಡಿಯಾಲ್ ಬೈಲ್ತುಳು, ರಂಗಭೂಮಿಯ ಏಕತಾನತೆಯಿಂದ ಹೊರಬಂದು ನೂತನ ಪ್ರಯೋಗಗಳಿಗೆ ಪ್ರಯತ್ನಿಸಬೇಕಾದ ಅಗತ್ಯ ಇದೆ ಎಂದು ಪ್ರತಿಪಾದಿಸಿದರು.

ಹಿರಿಯ ರಂಗ ನಿರ್ದೇಶಕ ಶ್ರೀಪಾದ ಭಟ್ ಮಾತನಾಡಿ, 'ರಂಗಚಟುವಟಿಕೆಗಳು ಸಾಮಾಜಿಕ ಸ್ವಾಸ್ಥ್ಯಕ್ಕೆ ಸಹಕರಿಸುವ ಪ್ರಭಾವಿ ಮಾಧ್ಯಮ' ಎಂದರು.

ಇದೇ ಸಂದರ್ಭದಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿಗೆ ಭಾಜನರಾದ ರಂಗಕರ್ಮಿ ವಿಜಯ ಕುಮಾರ್ ಕೊಡಿಯಾಲ್ ಬೈಲ್ ಅವರನ್ನು ಸನ್ಮಾನಿಸಲಾಯಿತು.

ಅರೆಹೊಳೆ ಪ್ರತಿಷ್ಠಾನದ ಗೌರವಾಧ್ಯಕ್ಷ ಹರಿಕೃಷ್ಣ ಪುನರೂರು ಅಧ್ಯಕ್ಷತೆ ವಹಿಸಿದ್ದರು. ಸಲಹೆಗಾರ ಕೆ ಸಿ ಪ್ರಭು, ಪಾದುವಾ ಕಾಲೇಜಿನ ಪ್ರಾಂಶುಪಾಲ ರೆ.ಫಾ. ಅಲ್ವಿನ್ ಸೆರಾವೋ ಉಪಸ್ಥಿತರಿದ್ದರು. ಅರೆಹೊಳೆ ಸದಾಶಿವ ರಾವ್ ಸ್ವಾಗತಿಸಿ, ಎಕ್ಸ್‌ಪರ್ಟ್ ಕಾಲೇಜಿನ ಕನ್ನಡ ಉಪನ್ಯಾಸಕ ಕರುಣಾಕರ ಬಳ್ಕೂರು ನಿರೂಪಿಸಿ, ವಂದಿಸಿದರು. ನಂತರ ಸಾಗರದ ಸ್ಪಂದನ ಕಲಾವಿದರಿಂದ ಡಾ.ಶ್ರೀಪಾದ ಭಟ್ ನಿರ್ದೇಶನದ ನಾಟಕ 'ಯುದ್ಧ ಬಂತು ಮನೆಯವರೆಗೆ' ಪ್ರದರ್ಶನಗೊಂಡಿತು.



Scanned with CamScanner

# ಜ. 25: 'ಅರೆಹೊಳೆ ರಂಗ ನಡೆ' ಉದ್ಘಾಟನೆ, ನಾಟಕ ಪ್ರದರ್ಶನ

**ಮಹಾನಗರ,** ಜ. 22: ಅರೆಹೊಳೆ ಪ್ರತಿಷ್ಠಾನವು ಈ ವರ್ಷದಲ್ಲಿ ಪಾದುವರಂಗ ಅಧ್ಯಯನ ಕೇಂದ್ರ, ಲೋಗೋಸ್ ಥಿಯೇಟರ್ ಗ್ರೂಪ್ ಹಾಗೂ ಅಸ್ತಿತ್ವ ಸಹಯೋಗದಲ್ಲಿ 'ರಂಗ ನಡೆ-2020' ಎಂಬ ವಿನೂತನ ಪ್ರಯೋಗ ಆರಂಭಿಸಿದ್ದು, ಅದರ ಮೊದಲ ಕಾರ್ಯಕ್ರಮವು ಜನವರಿ 25ರಂದು ಪಾದುವ ಕಾಲೇಜಿನ ಬಯಲು ರಂಗ ವೇದಿಕೆಯಲ್ಲಿ ಉದ್ಘಾಟನೆಗೊಳ್ಳಲಿದೆ.

ರಂಗಕರ್ಮಿ ಮತ್ತು ರಂಗ ಸಮಾಜದ ಸದಸ್ಯ ಜೀವನರಾಂ ಸುಳ್ಯ ರಂಗನಡೆ-2020ನ್ನು ಉದ್ಘಾಟಿಸಲಿದ್ದು, ಅರೆಹೊಳೆ ಪ್ರತಿಷ್ಠಾನದ ಗೌರವಾಧ್ಯಕ್ಷ ಹರಿಕೃಷ್ಣ ಪುನರೂರು ಅವರು ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ. ರಂಗ ನಿರ್ದೇಶಕ ಡಾ। ಶ್ರೀಪಾದ ಭಟ್, ಪಾದುವ ಕಾಲೇಜಿನ ಪ್ರಾಂಶುಪಾಲ ವಂ। ಆಲ್ವಿನ್ ಸೆರಾವೋ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿರುವ ಈ ಕಾರ್ಯಕ್ರಮದಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತ ರಂಗಕರ್ಮಿ ವಿಜಯ ಕುಮಾರ್ ಕೊಡಿಯಾಲಬೈಲ್ ಅವರನ್ನು ರಂಗ ಸಮ್ಮಾನದಲ್ಲಿ ಸಮ್ಮಾನಿಸಲಾಗುವುದು. ಅನಂತರ ಸಾಗರದ ಸ್ಪಂದನ ತಂಡದವರಿಂದ ಡಾ। ಶ್ರೀಪಾದ್ ಭಟ್ ನಿರ್ದೇಶನದಲ್ಲಿ, ಲಿತುವೇನಿಯಾ, ವಾರ್ ಹಾಗೂ ರೈಡರ್ಸ್ ಟು ದಿ ಸೀ ಕಥೆಗಳ ನಾಟಕ ತ್ರಿವಳಿ, ಯುದ್ಧ ಬಂತು ಮನೆ ಬಾಗಿಲಿಗೆ ಪ್ರದರ್ಶನ ನಡೆಯಲಿದೆ ಎಂದು ಅರೆಹೊಳೆ ಪ್ರತಿಷ್ಠಾನದ ಗೌರವಾಧ್ಯಕ್ಷ ಹರಿಕೃಷ್ಣ ಪುನರೂರು ಅವರು ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

# ಕದ್ರಿ ಫಲಪುಷ್ಪ ಪ್ರದರ್ಶನದಲ್ಲಿ 'ಗೋಕುಲ ನಿರ್ಗಮನ' ಪ್ರದರ್ಶನ

**ಮಹಾನಗರ,** ಜ. 22: ಅರೆಹೊಳೆ ಪ್ರತಿಷ್ಠಾನವು ನಂದಗೋಕುಲ ತಂಡಕ್ಕೆ ನಿರ್ಮಿಸಿದ ಪುತಿನ ಅವರ ಕೃತಿ ಗೋಕುಲ ನಿರ್ಗಮನ ನೃತ್ಯ ನಾಟಕದ 19ನೇ ಪ್ರದರ್ಶನ ಜನವರಿ 25ರಂದು ಸಂಜೆ 5.30ಕ್ಕೆ ನಗರದ ಕದ್ರಿ ಪಾರ್ಕ್‌ನ ಬಯಲು ರಂಗ ವೇದಿಕೆಯಲ್ಲಿ, ತೋಟಗಾರಿಕಾ ಇಲಾಖೆ ಏರ್ಪಡಿಸುತ್ತಿರುವ ಫಲಪುಷ್ಪ ಪ್ರದರ್ಶನದ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಪ್ರದರ್ಶನಗೊಳ್ಳಲಿದೆ.

ನಂದಗೋಕುಲ ಕಲಾವಿದರ ತಂಡವು ಈ ನೃತ್ಯ ನಾಟಕದಲ್ಲಿ ಅಭಿನಯಿಸಲಿದೆ. ಶ್ವೇತಾ ಅರೆಹೊಳೆ ಅವರು ನಿರ್ದೇಶಿಸಿದ್ದು, ಶೋಧನ್ ಎರ್ಮಾಳ್, ಗುರುರಾಜ್ ಎಂ.ಬಿ. ಅವರು ಸಂಗೀತ ಸಂಯೋಜಿಸಿದ್ದಾರೆ. ಗೀತಾ ಅರೆಹೊಳೆ ವಸ್ತ್ರವಿನ್ಯಾಸ ಮತ್ತು ಕ್ರಿಸ್ಟೋಫರ್ ನೀನಾಸಂ ಅವರ ಬೆಳಕಿನ ವಿನ್ಯಾಸವಿದೆ ಎಂದು ಅರೆಹೊಳೆ ಪ್ರತಿಷ್ಠಾನದ ಅಧ್ಯಕ್ಷ ಅರೆಹೊಳೆ ಸದಾಶಿವ ರಾವ್ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

Scanned with CamScanner

# ನಂದಗೋಕುಲ ಕಲಾ ಪುರಸ್ಕಾರ ಪ್ರದಾನ



ಶಾರದಾ ಮಣಿಶೇಖರ್ ಅವರಿಗೆ ನಂದಗೋಕುಲ ಕಲಾ ಪುರಸ್ಕಾರ ಪ್ರದಾನ ಮಾಡಲಾಯಿತು.

**ಮಹಾನಗರ,** ಡಿ. 16: ಕಲಾವಿದರ ಸಾಧನೆಯನ್ನು ಗುರುತಿಸಿ ಗೌರವಿಸುವುದು ಕಲಾ ಪೋಷಣೆಗೆ ನೀಡುತ್ತಿರುವ ಗೌರವವಾಗಿದೆ ಎಂದು ರಾಜ್ಯ ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ಹರಿಕೃಷ್ಣ ಪುನರೂರು ಹೇಳಿದರು.

ಅರೆಹೊಳೆ ಪ್ರತಿಷ್ಠಾನ ಮತ್ತು ಗಾನ ನೃತ್ಯ ಅಕಾಡೆಮಿಗಳ ಜಂಟಿ ಆಶ್ರಯದಲ್ಲಿ ನಡೆದ ವಾರ್ಷಿಕ ನೃತ್ಯ ಕಾರ್ಯಕ್ರಮ 'ನೃತ್ಯ ವರ್ಷಾ-2019' ರಲ್ಲಿ ನೃತ್ಯ ಗುರು ವಿದುಷಿ ಶಾರದಾ ಮಣಿಶೇಖರ್ ಅವರಿಗೆ ನಂದಗೋಕುಲ ಕಲಾ ಪುರಸ್ಕಾರ ಪ್ರದಾನ ಮಾಡಿ ಅವರು ಮಾತನಾಡಿದರು.

ಸ್ವತಃ ಕಲಾ ತಂಡವಾಗಿದ್ದುಕೊಂಡು ಬೇರೆ ಕಲಾವಿದರನ್ನು ಗುರುತಿಸಿ ಗೌರವಿಸುವ ಕೆಲಸವನ್ನು ಅರೆಹೊಳೆ ಪ್ರತಿಷ್ಠಾನ ಮತ್ತು ಗಾನ ನೃತ್ಯ ಅಕಾಡೆಮಿಗಳು ಮಾಡುತ್ತಿರುವುದು ಮಾದರಿ ಎಂದು ಶ್ಲಾಘಿಸಿದರು. ನೃತ್ಯ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ನಿಜಾರ್ಥದ ಅಮ್ಮನಂತೆ ತನ್ನನ್ನು ತೊಡಗಿಸಿಕೊಂಡಿರುವ ಶಾರದಾ ಮಣಿಶೇಖರ್ ಓರ್ವ ಮಾದರಿ ಗುರುವಾಗಿದ್ದು, ಅವರಿಂದ ಅದೆಷ್ಟೋ ಪ್ರತಿಭೆಗಳು ಬದುಕು ಪಡೆದಿವೆ ಎಂದು ಗಾನ ನೃತ್ಯ ಅಕಾಡೆಮಿಯ ನಿರ್ದೇಶಕಿ ವಿದ್ಯಾಶ್ರೀ ರಾಧಾಕೃಷ್ಣ ಅಭಿನಂದಿಸಿದರು.

ಪಾದುವ ರಂಗ ಅಧ್ಯಯನ ಕೇಂದ್ರ, ಅಸ್ತಿತ್ವ ಸಂಸ್ಥೆಗಳ ಸಹಯೋಗದೊಂದಿಗೆ 7 ದಿನಗಳ ಕಾಲ ಪಾದುವ ರಂಗಮಂದಿರದಲ್ಲಿ ಹಿರಿಯ ರಂಗಕರ್ಮಿ ಸದಾನಂದ ಸುವರ್ಣ ಗೌರವಾರ್ಥ ನಡೆಯುತ್ತಿರುವ ಅರೆಹೊಳೆ ರಂಗ ಹಬ್ಬದ ಮೊದಲ ದಿನವಾಗಿ ನೃತ್ಯ ವರ್ಷಾ ನಡೆಯಿತು.

ಪಾದುವ ಕಾಲೇಜಿನ ಪ್ರಾಂಶುಪಾಲ ವಂ। ಆಲ್ವಿನ್ ಸೆರಾವೋ, ಮನಪಾ ಸದಸ್ಯೆ ಸುಮಂಗಳಾ ರಾವ್, ಅರೆಹೊಳೆ ಪ್ರತಿಷ್ಠಾನದ ಗೌರವ ಸಲಹೆಗಾರ ಕೆ.ಸಿ. ಪ್ರಭು, ಅರೆಹೊಳೆ ಪ್ರತಿಷ್ಠಾನದ ಉಪಾಧ್ಯಕ್ಷೆ ಗೀತಾ ಅರೆಹೊಳೆ, ಸನಾತನ ನಾಟ್ಯಾಲಯದ ಚಂದ್ರಶೇಖರ್ ಶೆಟ್ಟಿ ರಂಗ ಕರ್ಮಿ ಸದಾನಂದ ಸುವರ್ಣ ಉಪಸ್ಥಿತರಿದ್ದರು. ಮಾಧುರಿ ಶ್ರೀರಾಂ ನಿರೂಪಿಸಿದರು. ಅರೆಹೊಳೆ ಸದಾಶಿವ ರಾವ್ ಸ್ವಾಗತಿಸಿ, ಗಾನ ನೃತ್ಯ ಅಕಾಡೆಮಿಯ ಕಾರ್ಯದರ್ಶಿ ರಾಧಾಕೃಷ್ಣ ಭಟ್ ವಂದಿಸಿದರು. ಗಾನ ನೃತ್ಯ ಅಕಾಡೆಮಿಯ ವಿದ್ಯಾರ್ಥಿನಿಯರಿಂದ ವಿದ್ಯಾಶ್ರೀ ರಾಧಾಕೃಷ್ಣ ಅವರ ನಿರ್ದೇಶನದಲ್ಲಿ ನೃತ್ಯ ವೈಭವ ಹಾಗೂ ದಶಾವತಾರ ನೃತ್ಯ ಪ್ರಸ್ತುತಿ ನಡೆಯಿತು.

Scanned with CamScanner

# ಅರೆಹೊಳೆ ರಂಗನಡೆ-2020 ಉದ್ಘಾಟನೆ

■ **ವಿಕ ಸುದ್ದಿಲೋಕ** ಮಂಗಳೂರು



ಬೇರೆಲ್ಲ ಲಲಿತಕಲಾ ಕ್ಷೇತ್ರಗಳಿಗೆ ಹೋಲಿಸಿದರೆ ರಂಗಭೂಮಿ ಕಲಾವಿದರು ಹೆಚ್ಚು ನಿರ್ಲಕ್ಷಿತರಾಗುತ್ತಿರುವುದು ಅತ್ಯಂತ ಬೇಸರದ ಸಂಗತಿ ಎಂದು ಹಿರಿಯ ರಂಗ ಕರ್ಮಿ ಹಾಗೂ ರಂಗ ಸಮಾಜದ ಸದಸ್ಯ ಜೀವನ ರಾಂ ಸುಳ್ಯ ಹೇಳಿದರು.

ಅವರು ಅರೆಹೊಳೆ ಪ್ರತಿಷ್ಠಾನವು ಪಾದುವಾ ರಂಗ ಅಧ್ಯಯನ ಕೇಂದ್ರ, ಅಸ್ತಿತ್ವ ಲೋಗೋಸ್ ಥಿಯೇಟರ್ ಗ್ರೂಪ್ ಸಹಯೋಗದೊಂದಿಗೆ, ಪಾದು ವಾ ಥಿಯೇಟರ್ ಹಬ್‌ನಲ್ಲಿ ಆಯೋಜಿಸಿದ್ದ ಅರೆಹೊಳೆ ರಂಗನಡೆ -2020 ಉದ್ಘಾಟಿಸಿ ಮಾತನಾಡಿದರು.

ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿಗೆ ಭಾಜನರಾದ ರಂಗಕರ್ಮಿ ವಿಜಯ ಕುಮಾರ್ ಕೊಡಿಯಾಲ್ ಬೈಲ್ ರಂಗಸನ್ಮಾನ ಸ್ವೀಕರಿಸಿ, ಮಾತನಾಡಿ, ತುಳು ರಂಗಭೂಮಿಯು ಏಕತಾನತೆಯಿಂದ ಹೊರ ಬಂದು ನೂತನ ಪ್ರಯೋಗಗಳಿಗೆ ಪ್ರಯತ್ನಿಸ ಬೇಕಾದ ಅಗತ್ಯ ಇದೆ ಎಂದರು. ಹಿರಿಯ ರಂಗ ನಿರ್ದೇಶಕ ಶ್ರೀಪಾದ ಭಟ್ ಮಾತನಾಡಿದರು.

ಅರೆಹೊಳೆ ಪ್ರತಿಷ್ಠಾನದ ಗೌರವಾಧ್ಯಕ್ಷ ಹರಿಕೃಷ್ಣ ಪುನರೂರು ಅಧ್ಯಕ್ಷತೆ ವಹಿಸಿದ್ದರು, ಸಲಹೆಗಾರ ಕೆ.ಸಿ.ಪ್ರಭು, ಪಾದುವಾ ಕಾಲೇಜಿನ ಪ್ರಿನ್ಸಿಪಾಲ್ ರೆ.ಫಾ.ಆಲ್ವಿನ್ ಸೆರಾವೋ ಉಪಸ್ಥಿತರಿದ್ದರು. ಅರೆಹೊಳೆ ಸದಾಶಿವ ರಾವ್ ಸ್ವಾಗತಿಸಿದರು. ಕನ್ನಡ ಉಪನ್ಯಾಸಕ ಕರುಣಾಕರ ಬಳ್ಕೂರು ನಿರೂಪಿಸಿ ವಂದಿಸಿದರು. ನಂತರ ಸಾಗರದ ಸ್ಪಂದನ ಕಲಾವಿದರಿಂದ ಡಾ.ಶ್ರೀಪಾದ ಭಟ್ ನಿರ್ದೇಶನದ ನಾಟಕ ಯುದ್ಧ ಬಂತು ಮನೆಯವರೆಗೆ ಪ್ರದರ್ಶನಗೊಂಡಿತು.

Scanned with CamScanner

# ಅರೆಹೊಳೆ ರಂಗಭೂಮಿ ಪ್ರಶಸ್ತಿ ಪ್ರದಾನ



■ **ವಿಕ ಸುದ್ದಿಲೋಕ** ಮಂಗಳೂರು

ರಂಗಭೂಮಿಯ ಮೂಲಕ ಜಗತ್ತಿಗೇ ಪ್ರೀತಿಯ ಸಂದೇಶ ಹರಡಬಹುದು. ಇಲ್ಲಿ ಯಾವುದೇ ಭಾಷೆ, ಜಾತಿ, ಮತದ ಹಂಗಿಲ್ಲದೇ ಜನ ಪ್ರೀತಿಯೊಂದನ್ನೇ ಪ್ರಮುಖವಾಗಿ ಪಸರಿಸಬಹುದು ಎಂಬುದನ್ನು ಪಾದುವಾ ಕಾಲೇಜಿನ ಪ್ರಿನ್ಸಿಪಾಲ್ ರೆ.ಫಾ. ಆಲ್ವಿನ್ ಸೆರಾವೋ ನಿರೂಪಿಸಿದ್ದಾರೆ ಎಂದು ಹಿರಿಯ ರಂಗಕರ್ಮಿ ಐ.ಕೆ. ಬೊಳುವಾರು ಹೇಳಿದರು.

ಪಾದುವಾ ಕಾಲೇಜಿನ ಬಯಲು ರಂಗಮಂದಿರದಲ್ಲಿ ನಡೆದ ರಾಜ್ಯಮಟ್ಟದ ಅರೆಹೊಳೆ ರಂಗಭೂಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ಹಿರಿಯ ರಂಗಕರ್ಮಿ ಸದಾನಂದ ಸುವರ್ಣ ಅವರ ಗೌರವಾರ್ಥ ಅರೆಹೊಳೆ ರಂಗಹಬ್ಬದ ಮೂರನೇ ದಿನ ಫಾ. ಅಲ್ವಿನ್ ಸೆರಾವೋ ಅವರಿಗೆ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಸ್ವೀಕರಿಸಿದ ಫಾ. ಆಲ್ವಿನ್ ಸೆರಾವೋ ಮಾತನಾಡಿ, ರಂಗ ಪ್ರೀತಿಗೆ ತಮ್ಮ ಬೆನ್ನೆಲುಬಾಗಿ ನಿಂತ ವಿದ್ಯಾರ್ಥಿ ವೃಂದ, ರಂಗಾಸಕ್ತರ ಪಾಲಿಗೆ ಸಂದ ಪ್ರಶಸ್ತಿ ಇದಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕೆ.ಸಿ. ಪ್ರಭು, ಇಂತಹ ಪ್ರಶಸ್ತಿಗಳ ಮೂಲಕ, ನಿಸ್ವಾರ್ಥ ಸೇವೆ ಮಾಡುವ ಸಾಧಕರಿಗೆ ಮತ್ತಷ್ಟು ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದರು.

ಆಯನ ನಾಟಕದ ಮನೆಯ ಮೋಹನ್‌ಚಂದ್ರ ಯು., ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ಜೋಸೆಫ್ ನೀನಾಸಂ, ರಂಗಕರ್ಮಿ ಕ್ರಿಸ್ಟೋಫರ್ ನೀನಾಸಂ, ಜೇಸಿಐ ಲಾಲ್‌ಬಾಗ್ ಅಧ್ಯಕ್ಷ ಪ್ರೀತಮ್ ಪ್ರಿನ್ಸ್ ಪಿಂಟೋ, ಫಾ.ಆಲ್ವಿನ್ ಸೆರಾವೋ ಅವರ ತಂದೆ-ತಾಯಿ ಹಾಗೂ ಸಹೋದರ, ಅರೆಹೊಳೆ ಪ್ರತಿಷ್ಠಾನದ ಉಪಾಧ್ಯಕ್ಷೆ ಗೀತಾ ಅರೆಹೊಳೆ ಉಪಸ್ಥಿತರಿದ್ದರು.

ಅರೆಹೊಳೆ ಸದಾಶಿವ ರಾವ್ ಸ್ವಾಗತಿಸಿದರು. ವಿಶಾಲಾಕ್ಷಿ ರಾವ್ ವಂದಿಸಿದರು. ಶ್ವೇತಾ ಅರೆಹೊಳೆ, ಪೃಥ್ವಿ ರಾವ್ ಕಾರ್ಯಕ್ರಮ ನಿರೂಪಿಸಿದರು. ನಂತರ ಪಾದುವಾ ರಂಗ ಅಧ್ಯಯನ ಕೇಂದ್ರದ ಮಸ್ಕರೇಡ್ ಶಿಬಿರಾರ್ಥಿಗಳಿಂದ ಕೇರಳದ ನಿರ್ದೇಶಕ ಅರುಣ್‌ಲಾಲ್ ನಿರ್ದೇಶನದ ತುಳು ನಾಟಕ 'ಕೆಂಡೋನಿಯನ್' ಪ್ರದರ್ಶನಗೊಂಡಿತು.

Scanned with CamScanner

# ಕಂಸನನ್ನು ಗೆಲ್ಲಿಸಿದ ನಂದಗೋಕುಲ



■ ಸುಬ್ರಾಯ ಭಟ್ ಎನ್. ಕೊಟ್ಟಾರ ಮಂಗಳೂರು

ಕನ್ನಡದ ಕವಿಶ್ರೇಷ್ಠ ಪುತಿನ ಅವರ ಗೋಕುಲ ನಿರ್ಗಮನವನ್ನು ರಂಗಕ್ಕಿಳಿಸಿ ನೃತ್ಯ ನಾಟಕವನ್ನಾಗಿ ಯಶಸ್ವಿ ಪ್ರದರ್ಶನದೊಂದಿಗೆ ಮುಂದುವರಿಸಿರುವ ಅರೆಹೊಳೆ ಪ್ರತಿಷ್ಠಾನದ ನಂದಗೋಕುಲ ಕಲಾವಿದರು, ಕನ್ನಡದ ಮತ್ತೋರ್ವ ಶ್ರೇಷ್ಠ ಕವಿ ಡಾ.ಎಚ್. ಎಸ್ ವೆಂಕಟೇಶಮೂರ್ತಿಯವರ ಪ್ರಸಿದ್ಧ ನಾಟಕ ಕಂಸಾಯಣವನ್ನು ರಂಗದ ಮೇಲೆ ತರಲು ಹೊರಟಿದ್ದು ಸಾಹಸವೇ ಸರಿ! ಆದರೆ ವರ್ತಮಾನದ ಮೇರು ನಿರ್ದೇಶಕರೆಂದು ಪರಿಗಣಿಸಲ್ಪಡುತ್ತಿರುವ ಡಾ.ಶ್ರೀಪಾದ್ ಭಟ್ ಈ ಕೃತಿ ನಿರ್ದೇಶಿಸ ಹೊರಟಾಗ ಸಹಜವಾಗಿಯೇ ನಿರೀಕ್ಷೆಗಳಿದ್ದು, ಅವರು ಆ ಭರವಸೆ ಹುಸಿಗೊಳಿಸಲಿಲ್ಲ.

ಪಾದುವಾ ಥಿಯೇಟರ್ ಹಬ್‌ನಲ್ಲಿ ಈ ನಾಟಕದ ಮೊದಲ ಪ್ರದರ್ಶನ ನಡೆಯಿತು. ನೃತ್ಯದಲ್ಲಿ ಈಗಾಗಲೇ ಹೆಸರು ಮಾಡಿದ ತಂಡವನ್ನು, ಪೂರ್ತಿ ಧ್ವನಿಮುದ್ರಿತ ನೃತ್ಯ ನಾಟಕದ ಮೂಲಕ ನೋಡಿದ ಪ್ರೇಕ್ಷಕರಿಗೆ ಕಂಸಾಯಣದಂಥ ಗಟ್ಟಿ ನಾಟಕವನ್ನು ಮಕ್ಕಳೇ ತುಂಬಿಕೊಂಡಿರುವ ತಂಡ ಹೇಗೆ ಪ್ರಸ್ತುತ ಪಡಿಸೀತು ಎಂಬ ಕುತೂಹಲ ಇದ್ದದ್ದು ಸಹಜ. ಕೃಷ್ಣ ಗೋಕುಲ ನಿರ್ಗಮನದಿಂದ ಮಥುರೆಯೆಡೆಗೆ ಮುಖ ಮಾಡಿದ ದೃಶ್ಯವನ್ನು ಪುರುಷ, ಸ್ತ್ರೀ ನಿರೂಪಕರು ವಿವರಿಸುತ್ತ ಸಾಗುವ ನಾಟಕದಲ್ಲಿ ನಡುವೆ ಕೃಷ್ಣನ ಶೌರ್ಯದ ಕಥೆಗಳನ್ನು ಜೋಡಿಸಿ, ಎಲ್ಲೂ ಗೊಂದಲವಾಗದಂತೆ ಪ್ರದರ್ಶಿಸಿದ್ದು, ಯಾವ ರಂಗ ಕಲಾವಿದರ ಪ್ರಬುದ್ಧತೆಗಳಿಗೂ ತಾವು ಸಮಾನರಾಗಬಲ್ಲೆವು ಎಂಬುದನ್ನು ಎರಡನೇ ತರಗತಿಯಿಂದ ಸ್ನಾತಕೋತ್ತರ ಓದುವ ತನಕದ ವಿದ್ಯಾರ್ಥಿಗಳು ಸಾಬೀತು ಮಾಡಿದರು.

ನಿಜ. ಸಂಗೀತ ಧ್ವನಿಮುದ್ರಿತ ಬೇಡವಿತ್ತು ಎಂಬುದು ಸುಲಭ. ಆದರೆ ಅದು ಇಂದಿನ ಅನಿವಾರ್ಯತೆ. ಅಸಂಬದ್ಧತೆಯೇ ಇಲ್ಲದೆ ಇಡೀ ನಾಟಕದುದ್ದಕ್ಕೂ ಸಂಗೀತ ಹಾಸುಹೊಕ್ಕಾಗಿತ್ತು. ಮೂಲತಃ ನೃತ್ಯ ಕಲಾವಿದರ ತಂಡವಾದ ಹಿನ್ನೆಲೆಯಲ್ಲಿ ನೃತ್ಯ ನಾಟಕದುದ್ದಕ್ಕೂ ಗೆಲ್ಲುತ್ತಲೇ ಸಾಗಿತ್ತು -ಅತ್ಯುತ್ತಮವಾಗಿತ್ತು. ನೃತ್ಯ ಸಂಯೋಜನೆ, ಭಾವಪೂರ್ಣ ಅಭಿನಯ, ಅದಕ್ಕೊಪ್ಪುವ ಬೆಳಕಿನ ಸಂಯೋಜನೆ....ಎಲ್ಲೂ ಇನಿತೂ ಕುಂದಾಗಲಿಲ್ಲ.

## ಭವಿಷ್ಯದ ಪ್ರಬುದ್ಧ ತಂಡದ ಸೂಚನೆ

ಇನ್ನು ದೃಶ್ಯ ಸಂಯೋಜನೆ... ಇರುವ ನಿಯಮಿತ ಪರಿಕರಗಳ ಮೂಲಕವೇ ಕಂಸಾಸ್ಥಾನ, ಮಥುರೆಯ ಬೀದಿ, ಕಾಳಿಂದಿಯಲ್ಲಿ ಕಾಳಿಂಗ ಮರ್ದನ, ಕೃಷ್ಣ ಹೋದಲ್ಲೇ ಬೃಂದಾವನ ಸೃಷ್ಟಿ ಎಂಬುದನ್ನು ಅರ್ಥಪೂರ್ಣವಾಗಿ ಪ್ರತಿಧ್ವನಿಸುವ ಆಳೆತ್ತರದ ಕೊಳಲು... ಇಷ್ಟು ಚಿಕ್ಕ ಮಕ್ಕಳ ಕೈಯಲ್ಲಿ ಇಷ್ಟು ದೊಡ್ಡ ಸಾಧನೆ ಮಾಡಿಸಿದ ನಿರ್ದೇಶಕರಿಗೆ ಭೇಷ್ ಅನ್ನಲೇಬೇಕು. ರಂಗಭೂಮಿಯಲ್ಲಿನ್ನೂ ಅನುಭವದ ಆರಂಭದಲ್ಲಿರುವ ಈ ವಿದ್ಯಾರ್ಥಿ ಸಮುದಾಯ ಎಲ್ಲೂ ಎಡವದೆ ದೃಶ್ಯದಿಂದ ದೃಶ್ಯಕ್ಕೆ ಕಟ್ಟಿಕೊಳ್ಳುತ್ತ ಸಾಗಿದ ನಾಟಕ, ಭವಿಷ್ಯದಲ್ಲಿ ರಂಗಭೂಮಿಗೊಂದು ವರದಾನವಾಗುವ ಪ್ರಬುದ್ಧ ತಂಡವೊಂದರ ಸೂಚನೆ ನೀಡಿದರು.

## ಸಾಮೂಹಿಕ ಪ್ರಯತ್ನ, ಪಳಗಿದ ಪ್ರಬುದ್ಧತೆ

ಕಂಸನಾಗಿ ಶ್ವೇತಾ ಅರೆಹೊಳೆ, ತಾನೋರ್ವ ನೃತ್ಯಗಾರ್ತಿ ಮಾತ್ರವಲ್ಲ, ಉತ್ತಮ ನಟಿಯೂ ಎಂಬುದನ್ನು ಸಾಬೀತುಗೊಳಿಸಿದರು. ಸ್ಪಷ್ಟ ಮಾತು, ಅಗತ್ಯಕ್ಕೆ ಹೊಂದುವ ಏರಿಳಿತದ ಸಂಭಾಷಣೆ, ಕಂಸನೆಂದರೆ ಹೀಗೇ ಎಂಬಂತೆ ಕಟ್ಟಿಕೊಟ್ಟರೆ, ನಿರೂಪಕ ಪುರುಷ ಹಾಗೂ ಸ್ತ್ರೀ ಪಾತ್ರಧಾರಿಗಳಾದ ವಿಮರ್ಷ ಕಿರೋಡಿಯನ್ ಮತ್ತು ಶ್ರಾವ್ಯಾ ಸಾಲಿಯಾನ್ ರಂಗಭವಿಷ್ಯದಲ್ಲಿ ಭರವಸೆ ಹುಟ್ಟಿಸಿದ್ದಾರೆ. ಬಲರಾಮ, ವಸುದೇವ ಹಾಗೂ ನೃತ್ಯ ಎಲ್ಲದರಲ್ಲೂ ತೊಡಗಿಕೊಂಡು ಪ್ರಬುದ್ಧತೆ ಮೆರೆದ ಭೂಮಿಕಾ ಗಟ್ಟಿ, ಕೃಷ್ಣನಾಗಿ ಇದೇ ಮೊದಲ ಬಾರಿ ರಂಗ ಪ್ರವೇಶಿಸಿದ ಕೃತಿ ಶ್ರೀನಿವಾಸ್, ನೃತ್ಯದಲ್ಲಿಡೀ ಎದ್ದು ಕಾಣುತ್ತಿದ್ದ ಮತ್ತು ದೇವಕಿಯಾಗಿ ನಟಿಸಿದ ಪೃಥ್ವಿ ಎಸ್. ರಾವ್, ನೃತ್ಯದ ಮುಂಚೂಣಿಯಲ್ಲಿದ್ದ ದಿವ್ಯಾ, ಮಂತ್ರಿಯಾಗಿ ಚೈತ್ರಾ ಕೋಟ್ಯಾನ್‌ರ ಹಾಸ್ಯಮಯ ನಟನೆ... ಹೀಗೆ ಎಲ್ಲರ ಸಾಮೂಹಿಕ ಪ್ರಯತ್ನ, ನಿರ್ದೇಶಕರ ಗರಡಿಯಲ್ಲಿ ಪಳಗಿದ ಪ್ರಬುದ್ಧತೆ ಪ್ರದರ್ಶಿಸಿತು.



ಕರಾವಳಿ ವೈವಿಧ್ಯ

## ನಿರ್ದೇಶನ, ನಟನೆಗೆ ಶ್ಲಾಘನೆ

ನೃತ್ಯ- ನಟನೆಗಳೆರಡಕ್ಕೂ ಬೆಳಕಿನ ಸಂಯೋಜನೆ ಮಾಡುವ ಸವಾಲಿನಲ್ಲಿ ರಾಜು ಮಣಿಪಾಲ್ ಗೆದ್ದಿದ್ದಾರೆ. ಬಹುಶಃ ಅತ್ಯಂತ ಕಾಳಜಿಯಿಂದ ಕಟ್ಟಿದ ನಾಟಕವಾದರೂ, ವಸ್ತ್ರ ವಿನ್ಯಾಸ ಆಕರ್ಷಕವೇ ಆಗಿದ್ದರೂ ಕೃಷ್ಣ, ಕಂಸ, ಬಲರಾಮರ ಶಿರೋಧಾರೆಗಳು ಕಲಾವಿದರ ಪ್ರಬುದ್ಧ ಮುಖಭಾವ ಮುಚ್ಚುವಷ್ಟೂ ಅಭಾಸವೆನಿಸಿತು. ಇದನ್ನು ಸರಿಪಡಿಸಿಕೊಂಡರೆ ನ್ಯೂನತೆಗಳೇ ಇಲ್ಲದ ರಂಗ ಪ್ರಯೋಗವಾಗಿ ಕಂಸಾಯಣ ಮುಂದುವರಿದೀತು. ನಿರ್ದೇಶಕರು ಆರಂಭದಲ್ಲೇ ಹೇಳಿದ ಹಾಗೆ ಅತ್ಯಂತ ಕಡಿಮೆ ಅವಧಿಯಲ್ಲಿ ಕಟ್ಟಿದ ನಾಟಕವಾದರೂ ನಿರ್ದೇಶನದಲ್ಲಿ, ನಟನೆಯಲ್ಲಿ ಎಲ್ಲೂ ಕುಂದು ಕಾಣಲಿಲ್ಲ. ಒಟ್ಟಾರೆಯಾಗಿ ನಂದಗೋಕುಲ ಕಲಾವಿದರು, ಡಾ.ಶ್ರೀಪಾದ ಭಟ್ ಅವರ ಮಂಗಳೂರಿನಲ್ಲಿನ ಮೊದಲ ನಿರ್ದೇಶನದ ನಾಟಕವನ್ನು ಗೆಲ್ಲಿಸಿದ್ದು, ನಿರ್ದೇಶಕ ಹಾಗೂ ಕಲಾತಂಡಕ್ಕೆ ದೊಡ್ಡ ಸಂಖ್ಯೆಯ ಪ್ರೇಕ್ಷಕರ ಶ್ಲಾಘನೆ ಸಂದಿದೆ.

Scanned with CamScanner

# ಆಧುನಿಕ ಬದುಕಿನ ಸಮಸ್ಯೆ ಬಿಡಿಸಿಡುವ 'ಗೋಕುಲ ನಿರ್ಗಮನ'

• ಡಾ.ಪಾರ್ವತಿ ಜಿ.ಐತಾಳ್

'ಗೋಕುಲ ನಿರ್ಗಮನ' ಪು.ತಿ.ನ. ಅವರ ಬಹು ಆಯಾಮಗಳನ್ನೊಳಗೊಂಡ ಸಂಗೀತ-ನೃತ್ಯ ರೂಪಕ. ಸಾರ್ವಕಾಲಿಕ ಮಹತ್ವವುಳ್ಳ ಒಂದು ಅಪೂರ್ವ ಕಲಾಕೃತಿ. ಸಾಹಿತ್ಯ-ಸಂಗೀತಗಳ ಅದ್ಭುತ ಸಂಗಮವನ್ನು ಇಲ್ಲಿ ನಾವು ಕಾಣುತ್ತೇವೆ. ನೃತ್ಯ ಮತ್ತು ಅಭಿನಯಗಳಿಗೂ ಅಪಾರ ಅವಕಾಶಗಳನ್ನು ಮಾಡಿಕೊಡುವ ಇದು ಒಂದು ವಿಶಿಷ್ಟ ರಂಗಕೃತಿಯಾಗಬಲ್ಲ ಎಲ್ಲ ಸಾಧ್ಯತೆಗಳನ್ನು ತನ್ನ ಒಡಲಲ್ಲಿಟ್ಟುಕೊಂಡಿದೆ.

ಪೌರಾಣಿಕ ಹಿನ್ನೆಲೆಯ ವಸ್ತುವಾದರೂ ಆಧುನಿಕ ಬದುಕಿನ ಹಲವು ಸಮಸ್ಯೆಗಳನ್ನೂ ನಮ್ಮ ಮುಂದೆ ಸಾಂಕೇತಿಕವಾಗಿ ಇದು ತೆರೆದಿಡುತ್ತದೆ. ನಂದಗೋಕುಲದ ಕಣಕಣದೊಂದಿಗೂ ಬಿಡಿಸಲಾಗದ ಬಂಧವನ್ನು ಇಟ್ಟುಕೊಂಡಿರುವ ಕೃಷ್ಣ ತಾನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವ ಮುರಳಿಯನ್ನೂ ರಾಧೆಯನ್ನೂ ತೊರೆಯುವ ಅನಿವಾರ್ಯತೆ ಸೃಷ್ಟಿಯಾಗಿ ಆತ ಮಥುರೆಗೆ ತೆರಳುವ ಯಾತನಾಮಯ ಸಂದರ್ಭದ ಹೃದಯ ವಿದ್ರಾವಕ ಚಿತ್ರಣ ಇಲ್ಲಿದೆ.

ಇಂದು ಬೇರೆ ಬೇರೆ ಕಾರಣಗಳಿಂದಾಗಿ ಹಳ್ಳಿಗಳಿಂದ ನಗರದತ್ತ ತೆರಳಿ ಅಲ್ಲೇ ನೆಲೆಯುವ ಯುವಜನತೆಯತ್ತಲೋ ಅಥವಾ ಜಾಗತೀಕರಣವೆಂಬ ಆಕರ್ಷಕ ಹೆಸರಿನಿಂದ ಗ್ರಾಮೀಣ ಸರಳ ಜೀವನಕ್ರಮದಲ್ಲಿ ತಮ್ಮ ನೆಲೆಯನ್ನು ಕಂಡುಕೊಂಡಿರುವ ಅಮಾಯಕರನ್ನು ಸೆಳೆದು ವಂಚಿಸುವ ಕಾರ್ಪೋರೇಟ್ ಜಗತ್ತಿನ ಹುನ್ನಾರದತ್ತಲೋ ಈ ನಾಟಕವು ಸಾಂಕೇತಿಕವಾಗಿ ಬೊಟ್ಟು ಮಾಡುವ ಸಾಧ್ಯತೆಯಿದೆ.

75 ನಿಮಿಷಗಳ ಈ ನೃತ್ಯ ರೂಪಕವನ್ನು ಕುಂದಾಪುರದ ರೋಟರಿ ಲಕ್ಷ್ಮೀನರಸಿಂಹ ಕಲಾಮಂದಿರದಲ್ಲಿ ರಂಜಿತ್ ಕುಮಾರ್ ಶೆಟ್ಟಿ ಮತ್ತು ಬಳಗದವರ ಸಂಯೋಜನೆಯಲ್ಲಿ ನಡೆಯುತ್ತಿರುವ ಐದು ದಿನಗಳ ಯಕ್ಷೋತ್ಸವದ ಸಂದರ್ಭದಲ್ಲಿ ಮಂಗಳೂರಿನ ಅರೆಹೊಳೆ ಪ್ರತಿಷ್ಠಾನದ ಆಶ್ರಯದಲ್ಲಿ ಕಲಾಪ್ರದರ್ಶನಗಳನ್ನು ನೀಡುತ್ತಿರುವ ನಂದಗೋಕುಲ ತಂಡದವರು ಪ್ರಸ್ತುತಪಡಿಸಿದರು. ನಿರ್ದೇಶನ ಮಾಡಿದವರು ಶ್ವೇತಾ ಅರೆಹೊಳೆ.

ಆರಂಭದಲ್ಲಿ ವೃಂದಾವನದ ಬೆಳದಿಂಗಳಲ್ಲಿ ಕೃಷ್ಣನ ಮುರಳೀಗಾನದ ಮಾಧುರ್ಯಕ್ಕೆ ಮನಸೋತು ಆನಂದದಲ್ಲಿ ಮೈಮರೆತು ನರ್ತಿಸುತ್ತಿರುವ ಗೋಪಿಕೆಯರ ನೃತ್ಯವು ನಾಟಕದ ವಾತಾವರಣವನ್ನು ನಿರ್ಮಿಸುತ್ತದೆ. ಅಲ್ಲಿಗೆ ಕಂಸದೂತ ಅಕ್ರೂರನ ಆಗಮನವು ಮುಂದೆ ಬರುವ ಸಮಸ್ಯೆಯನ್ನು ಪರಿಚಯಿಸುತ್ತದೆ. ಕೃಷ್ಣನನ್ನು ಕೊಲ್ಲುವ ಸಂಚಿನ ಭಾಗವಾಗಿ ಕಂಸನು ಬಿಲ್ಲಹಬ್ಬದ ನೆಪದಲ್ಲಿ ಅವನನ್ನು ಮಥುರೆಗೆ ಕರೆತರಲು ಅಕ್ರೂರನನ್ನು ಕಳಿಸಿದ್ದಾನೆ. ಕೃಷ್ಣಭಕ್ತ ಅಕ್ರೂರನೀಗ ಇಕ್ಕಟ್ಟಿನಲ್ಲಿ ಸಿಲುಕಿದ್ದಾನೆ. ಅಡಿಗಡಿಗೂ ಗೋಕುಲದ ಮಂದಿಯನ್ನು ಎಲ್ಲ ರೀತಿಯ ಅಪಾಯಗಳಿಂದ ರಕ್ಷಿಸುವ ಕೃಷ್ಣ ಗೋಕುಲದೊಂದಿಗೆ ಮತ್ತು ಗೋಪಿಕೆಯರೊಂದಿಗೆ ಬೆಳೆಸಿಕೊಂಡ ಭಾವನಾತ್ಮಕ ಬಂಧವನ್ನು ಕಣ್ಣಾರ ನೋಡುವ ಅವನಿಗೆ ಕೃಷ್ಣನನ್ನು ಮಥುರೆಗೆ ಕರೆಯುವ ಉಪಾಯ ಹೇಗೆಂದು ಗೊತ್ತಾಗುವುದಿಲ್ಲ. ಕೃಷ್ಣನಿಗೆ ತನ್ನದೇ ದೇಹದ ಒಂದು ಅವಿಭಾಜ್ಯ ಅಂಗವಾಗಿರುವ ಮುರಳಿ ಮತ್ತು ಪ್ರಾಣಪ್ರಿಯ ಸಖಿ ರಾಧೆ, ಮಾತ್ರವಲ್ಲದೆ ಗೋಕುಲದ ಸಕಲ ಜೀವರಾಶಿಯೊಂದಿಗಿನ ಗಾಢವಾದ ಬಂಧವು ಒಂದೊಂದು ಪದ್ಯದಲ್ಲೂ ತೆರೆದುಕೊಳ್ಳುತ್ತ ಹೋಗುತ್ತದೆ.



ಕೊನೆಗೆ ಅಕ್ರೂರನು ಕೃಷ್ಣನನ್ನು ಹೇಗಾದರೂ ಮಾಡಿ ಒಪ್ಪಿಸಲು ಬಲರಾಮನ ಮೊರೆ ಹೋಗುತ್ತಾನೆ. ಮೊದಲು ಅನುಮಾನಿಸುವ ಕೃಷ್ಣ 'ಹೊರನಾಡ ಕರೆಯಲಿ ಕೇಡಿದೆ' ಎಂದು ಎಷ್ಟು ಹೇಳಿದರೂ ಕೇಳದೆ, 'ಕೇಡಿದೆಯೆಂಬ ನೆಪದಲ್ಲಿ ಹೇಡಿಯಾಗಬೇಡ'ವೆಂದು ಕೊಂಕು ನುಡಿದು ಬಲರಾಮ ಕೃಷ್ಣನನ್ನು ಒಪ್ಪಿಸುತ್ತಾನೆ. ಕೃಷ್ಣ ತೀರಾ ಒಲ್ಲದ ಮನಸ್ಸಿನಿಂದ ಹೊಕ್ಕುಳ ಬಳ್ಳಿಯ ಸಂಬಂಧವನ್ನು ಕಡಿದುಕೊಳ್ಳುತ್ತಿದ್ದೇನೇನೋ ಎಂಬಷ್ಟು ನೋವಿನಿಂದ ಗೋಕುಲ ನಿರ್ಗಮನಕ್ಕೆ ಸಿದ್ಧನಾಗುವುದು ನಾಟಕದ ಕ್ಲೈಮ್ಯಾಕ್ಸ್.

ಕಂಸನೊಂದಿಗಿನ ಯುದ್ಧದಲ್ಲಿ ಕೃಷ್ಣ ಗೆಲ್ಲುತ್ತಾನೆಂದು ಗೊತ್ತಿದ್ದರೂ ಈ ನಿರ್ಗಮನದ ಯಾತನಾಭರಿತ ದೃಶ್ಯವು ಪ್ರೇಕ್ಷಕನ ಕಣ್ಣುಗಳನ್ನು ಆರ್ದ್ರವಾಗಿಸುತ್ತದೆ.

ಕೃಷ್ಣನ ಪಾತ್ರದಲ್ಲಿ ಶ್ವೇತಾ ಅರೆಹೊಳೆ ಅವರ ಅಭಿನಯ, ನೃತ್ಯ, ಹಾವ-ಭಾವ ಮತ್ತು ಆಂಗಿಕ ಚಲನವಲನಗಳು ಅದ್ಭುತವಾಗಿದ್ದವು. ರಾಧೆ, ಬಲರಾಮರಲ್ಲೂ ತುಂಬಾ ಲವಲವಿಕೆಯಿತ್ತು. ಗೋಪಿಕೆಯರ ಗುಂಪು ನೃತ್ಯಗಳು ಆಕರ್ಷಕವಾಗಿದ್ದವು. ಕೃಷ್ಣನನ್ನು ಮಥುರೆಗೆ ಸೆಳೆಯುವ ಶಕ್ತಿಗಳ ನಿರ್ವಹಣೆ ಪರಿಣಾಮಕಾರಿಯಾಗಿತ್ತು. ರಾತ್ರಿಯ ಮಬ್ಬು ಬೆಳಕನ್ನು ತೋರಿಸಲು ಹಿಂದಿನಿಂದ ಚದುರಿಸಿದ ಹೊಗೆಯು ಮುಂದೆ ಗೋಕುಲವು ಕತ್ತಲಲ್ಲಿ ಮುಳುಗುವುದಕ್ಕೆ ಸಂಕೇತವಾಗಿ ನಿಂತು ದುರಂತವನ್ನೆದುರಿಸಲು ಮನಸ್ಸನ್ನು ಸಜ್ಜಾಗಿಸಲೋ ಎಂಬಂತಿತ್ತು.

ಪ್ರಸಾಧನ-ವೇಷಭೂಷಣಗಳು ಸರಳವೂ ಪಾತ್ರೋಚಿತವೂ ಆಗಿದ್ದವು (ಗೀತಾ ಅರೆಹೊಳೆ ಮತ್ತು ವಿಶಾಲಾ ರಾವ್) ಸಂಗೀತ ಮತ್ತು ಸಂಭಾಷಣೆಗಳಿಗೆ ಧ್ವನಿ ಮುದ್ರಿಕೆಯನ್ನು ಬಳಸಿದ್ದರೂ ಪಾತ್ರಗಳು ಮಾಡಿದ ಸಮಯೋಚಿತ ತುಟಿಚಲನೆ ಮತ್ತು ಅಭಿವ್ಯಕ್ತಿಗಳು ಪ್ರಸ್ತುತಿಯ ಹಿಂದಿನ ಪರಿಶ್ರಮಕ್ಕೆ ಸಾಕ್ಷಿಯಾಗಿದ್ದವು. (ನಿರ್ವಹಣೆ: ಸೋಹನ್ ಎಮಾನ್ ಮತ್ತು ಯುವರಾಜ್ ) ಎಳೆಯ ಕಲಾವಿದರೇ ತುಂಬಿದ್ದ ತಂಡವಾದರೂ ಎಲ್ಲರೂ ಕಥೆಯ ಸಾಂದರ್ಭಿಕ ಮಹತ್ವವನ್ನು ಬಹಳ ಚೆನ್ನಾಗಿ ಅರ್ಥಮಾಡಿಕೊಂಡು ಒಂದು ಒಳ್ಳೆಯ ರಂಗಕೃತಿಯನ್ನು ನಿರ್ಮಿಸಿದ್ದು ಅಭಿನಂದನಾರ್ಹ ವಿಚಾರ. ⌘



# ಆಧುನಿಕ ಬದುಕಿನ ಸಮಸ್ಯೆ ಬಿಡಿಸಿಡುವ ‘ಗೋಕುಲ ನಿರ್ಗಮನ’

• ಡಾ.ಪಾರ್ವತಿ ಜಿ.ಐತಾಳ್

‘ಗೋಕುಲ ನಿರ್ಗಮನ’ ಪು.ತಿ.ನ. ಅವರ ಬಹು ಆಯಾಮಗಳನ್ನೊಳಗೊಂಡ ಸಂಗೀತ-ನೃತ್ಯ ರೂಪಕ. ಸಾರ್ವಕಾಲಿಕ ಮಹತ್ವವುಳ್ಳ ಒಂದು ಅಪೂರ್ವ ಕಲಾಕೃತಿ. ಸಾಹಿತ್ಯ-ಸಂಗೀತಗಳ ಅದ್ಭುತ ಸಂಗಮವನ್ನು ಇಲ್ಲಿ ನಾವು ಕಾಣುತ್ತೇವೆ. ನೃತ್ಯ ಮತ್ತು ಅಭಿನಯಗಳಿಗೂ ಅಪಾರ ಅವಕಾಶಗಳನ್ನು ಮಾಡಿಕೊಡುವ ಇದು ಒಂದು ವಿಶಿಷ್ಟ ರಂಗಕೃತಿಯಾಗಬಲ್ಲ ಎಲ್ಲ ಸಾಧ್ಯತೆಗಳನ್ನು ತನ್ನ ಒಡಲಲ್ಲಿಟ್ಟುಕೊಂಡಿದೆ.

ಪೌರಾಣಿಕ ಹಿನ್ನೆಲೆಯ ವಸ್ತುವಾದರೂ ಆಧುನಿಕ ಬದುಕಿನ ಹಲವು ಸಮಸ್ಯೆಗಳನ್ನೂ ನಮ್ಮ ಮುಂದೆ ಸಾಂಕೇತಿಕವಾಗಿ ಇದು ತೆರೆದಿಡುತ್ತದೆ. ನಂದಗೋಕುಲದ ಜನರ ಜೊತೆಗೂ ಬಿಡಿಸಲಾಗದ ಬಂಧವನ್ನು ಇಟ್ಟುಕೊಂಡಿರುವ ಕೃಷ್ಣ ತಾನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವ ಮುರಳಿಯನ್ನೂ ರಾಧೆಯನ್ನೂ ತೊರೆಯುವ ಅನಿವಾರ್ಯತೆ ಸೃಷ್ಟಿಯಾಗಿ ಆತ ಮಥುರೆಗೆ ತೆರಳುವ ಯಾತನಾಮಯ ಸಂದರ್ಭದ ಹೃದಯ ವಿದ್ರಾವಕ ಚಿತ್ರಣ ಇಲ್ಲಿದೆ.

ಇಂದು ಬೇರೆ ಬೇರೆ ಕಾರಣಗಳಿಂದಾಗಿ ಹಳ್ಳಿಗಳಿಂದ ನಗರದತ್ತ ತೆರಳಿ ಅಲ್ಲೇ ನೆಲೆಯುವ ಯುವಜನತೆಯತ್ತಲೋ ಅಥವಾ ಜಾಗತೀಕರಣವೆಂಬ ಆಕರ್ಷಕ ಹೆಸರಿನಿಂದ ಗ್ರಾಮೀಣ ಸರಳ ಜೀವನಕ್ರಮದಲ್ಲಿ ತನ್ನ ನೆಲೆಯನ್ನು ಕಂಡುಕೊಂಡಿರುವ ಅಮಾಯಕರನ್ನು ಸೆಳೆದು ವಂಚಿಸುವ ಕಾರ್ಪೋರೇಟ್ ಜಗತ್ತಿನ ಹುನ್ನಾರದತ್ತಲೋ ಈ ನಾಟಕವು ಸಾಂಕೇತಿಕವಾಗಿ ಬೊಟ್ಟು ಮಾಡುವ ಸಾಧ್ಯತೆಯಿದೆ.

75 ನಿಮಿಷಗಳ ಈ ನೃತ್ಯ ರೂಪಕವನ್ನು ಕುಂದಾಪುರದ ರೋಟರಿ ಲಕ್ಷ್ಮೀನರಸಿಂಹ ಕಲಾಮಂದಿರದಲ್ಲಿ ರಂಜಿತ್ ಕುಮಾರ್ ಶೆಟ್ಟಿ ಮತ್ತು ಬಳಗದವರ ಸಂಯೋಜನೆಯಲ್ಲಿ ನಡೆಯುತ್ತಿರುವ ಐದು ದಿನಗಳ ಯಕ್ಷೋತ್ಸವದ ಸಂದರ್ಭದಲ್ಲಿ ಮಂಗಳೂರಿನ ಅರೆಹೊಳೆ ಪ್ರತಿಷ್ಠಾನದ ಆಶ್ರಯದಲ್ಲಿ ಕಲಾಪ್ರದರ್ಶನಗಳನ್ನು ನೀಡುತ್ತಿರುವ ನಂದಗೋಕುಲ ತಂಡದವರು ಪ್ರಸ್ತುತಪಡಿಸಿದರು. ನಿರ್ದೇಶನ ಮಾಡಿದವರು ಶ್ವೇತಾ ಅರೆಹೊಳೆ.

ಆರಂಭದಲ್ಲಿ ವೃಂದಾವನದ ಬೆಳದಿಂಗಳಲ್ಲಿ ಕೃಷ್ಣನ ಮುರಳೀಗಾನದ ಮಾಧುರ್ಯಕ್ಕೆ ಮನಸೋತು ಆನಂದದಲ್ಲಿ ಮೈಮರೆತು ನರ್ತಿಸುತ್ತಿರುವ ಗೋಪಿಕೆಯರ ನೃತ್ಯವು ನಾಟಕದ ವಾತಾವರಣವನ್ನು ನಿರ್ಮಿಸುತ್ತದೆ. ಅಲ್ಲಿಗೆ ಕಂಸದೂತ ಅಕ್ರೂರನ ಆಗಮನವು ಮುಂದೆ ಏಳುವ ಸಮಸ್ಯೆಯನ್ನು ಪರಿಚಯಿಸುತ್ತದೆ. ಕೃಷ್ಣನನ್ನು ಕೊಲ್ಲುವ ಸಂಚಿನ ಭಾಗವಾಗಿ ಕಂಸನು ಬಿಲ್ಲಹಬ್ಬದ ನೆಪದಲ್ಲಿ ಅವನನ್ನು ಮಥುರೆಗೆ ಕರೆತರಲು ಅಕ್ರೂರನನ್ನು ಕಳಿಸಿದ್ದಾನೆ. ಕೃಷ್ಣಭಕ್ತ ಅಕ್ರೂರನೀಗ ಇಕ್ಕಟ್ಟಿನಲ್ಲಿ



ಸಿಲುಕಿದ್ದಾನೆ. ಅಡಿಗಡಿಗೂ ಗೋಕುಲದ ಮಂದಿಯನ್ನು ಎಲ್ಲ ರೀತಿಯ ಅಪಾಯಗಳಿಂದ ರಕ್ಷಿಸುವ ಕೃಷ್ಣ ಗೋಕುಲದೊಂದಿಗೆ ಮತ್ತು ಗೋಪಿಕೆಯರೊಂದಿಗೆ ಬೆಳೆಸಿಕೊಂಡ ಭಾವನಾತ್ಮಕ ಬಂಧವನ್ನು ಕಣ್ಣಾರೆ ನೋಡುವ ಅವನಿಗೆ ಕೃಷ್ಣನನ್ನು ಮಥುರೆಗೆ ಕರೆಯುವ ಉಪಾಯ ಹೇಗೆಂದು ಗೊತ್ತಾಗುವುದಿಲ್ಲ. ಕೃಷ್ಣನಿಗೆ ತನ್ನದೇ ದೇಹದ ಒಂದು ಅವಿಭಾಜ್ಯ ಅಂಗವಾಗಿರುವ ಮುರಳಿ ಮತ್ತು ಪ್ರಾಣಪ್ರಿಯ ಸಖಿ ರಾಧೆ, ಮಾತ್ರವಲ್ಲದೆ ಗೋಕುಲದ ಸಕಲ ಜೀವರಾಶಿಯೊಂದಿಗಿನ ಗಾಢವಾದ ಬಂಧವು ಒಂದೊಂದು ಪದ್ಯದಲ್ಲೂ ತೆರೆದುಕೊಳ್ಳುತ್ತ ಹೋಗುತ್ತದೆ.

ಕೊನೆಗೆ ಅಕ್ರೂರನು ಕೃಷ್ಣನನ್ನು ಹೇಗಾದರೂ ಮಾಡಿ ಒಪ್ಪಿಸಲು ಬಲರಾಮನ ಮೊರೆ ಹೋಗುತ್ತಾನೆ. ಮೊದಲು ಅನುಮಾನಿಸುವ ಕೃಷ್ಣ, ‘ಹೊರನಾಡ ಕರೆಯಲಿ ಕೇಡಿದೆ’ ಎಂದು ಎಷ್ಟು ಹೇಳಿದರೂ ಕೇಳದೆ, ‘ಕೇಡಿದೆಯೆಂಬ ನೆಪದಲ್ಲಿ ಹೇಡಿಯಾಗಬೇಡ’ವೆಂದು ಕೊಂಕು ನುಡಿದು ಬಲರಾಮ ಕೃಷ್ಣನನ್ನು ಒಪ್ಪಿಸುತ್ತಾನೆ. ಕೃಷ್ಣ ತೀರಾ ಒಲ್ಲದ ಮನಸ್ಸಿನಿಂದ ಹೊಕ್ಕುಳ ಬಳ್ಳಿಯ ಸಂಬಂಧವನ್ನು ಕಡಿದುಕೊಳ್ಳುತ್ತಿದ್ದೇನೆನೋ ಎಂಬಷ್ಟು ನೋವಿನಿಂದ ಗೋಕುಲ ನಿರ್ಗಮನಕ್ಕೆ ಸಿದ್ಧನಾಗುವುದು ನಾಟಕದ ಕ್ಲೈಮ್ಯಾಕ್ಸ್.

ಕಂಸನೊಂದಿಗಿನ ಯುದ್ಧದಲ್ಲಿ ಕೃಷ್ಣ ಗೆಲ್ಲುತ್ತಾನೆಂದು ಗೊತ್ತಿದ್ದರೂ ಈ ನಿರ್ಗಮನದ ಯಾತನಾಭರಿತ ದೃಶ್ಯವು ಪ್ರೇಕ್ಷಕನ ಕಣ್ಣುಗಳನ್ನು ಆರ್ದ್ರವಾಗಿಸುತ್ತದೆ.

ಕೃಷ್ಣನ ಪಾತ್ರದಲ್ಲಿ ಶ್ವೇತಾ ಅರೆಹೊಳೆ ಅವರ ಅಭಿನಯ, ನೃತ್ಯ, ಹಾವ-ಭಾವ ಮತ್ತು ಆಂಗಿಕ ಚಲನವಲನಗಳು ಅದ್ಭುತವಾಗಿದ್ದುವು. ರಾಧೆ, ಬಲರಾಮರಲ್ಲೂ ತುಂಬಾ ಲವಲವಿಕೆಯಿತ್ತು. ಗೋಪಿಕೆಯರ ಗುಂಪು ನೃತ್ಯಗಳು ಆಕರ್ಷಕವಾಗಿದ್ದುವು. ಕೃಷ್ಣನನ್ನು ಮಥುರೆಗೆ ಸೆಳೆಯುವ ಶಕ್ತಿಗಳ ನಿರ್ವಹಣೆ ಪರಿಣಾಮಕಾರಿಯಾಗಿತ್ತು. ರಾತ್ರಿಯ ಮಬ್ಬು ಬೆಳಕನ್ನು ತೋರಿಸಲು ಹಿಂದಿನಿಂದ ಚಿಮುಕಿಸಿದ ಹೊಗೆಯು ಮುಂದೆ ಗೋಕುಲವು ಕತ್ತಲಲ್ಲಿ ಮುಳುಗುವುದಕ್ಕೆ ಸಂಕೇತವಾಗಿ ನಿಂತು ದುರಂತವನ್ನೆದುರಿಸಲು ಮನಸ್ಸನ್ನು ಸಜ್ಜುಗೊಳಿಸಲೋ ಎಂಬಂತಿತ್ತು.

ಪ್ರಸಾದನ-ವೇಷಭೂಷಣಗಳು ಸರಳವೂ ಪಾತ್ರೋಚಿತವೂ ಆಗಿದ್ದುವು (ಗೀತಾ ಅರೆಹೊಳೆ ಮತ್ತು ವಿಶಾಲಾ ರಾವ್) ಸಂಗೀತ ಮತ್ತು ಸಂಭಾಷಣೆಗಳಿಗೆ ಧ್ವನಿ ಮುದ್ರಿಕೆಯನ್ನು ಬಳಸಿದ್ದರೂ ಪಾತ್ರಗಳು ಮಾಡಿದ ಸಮಯೋಚಿತ ತುಟಿಚಲನೆ ಮತ್ತು ಅಭಿವ್ಯಕ್ತಿಗಳು ಪ್ರಸ್ತುತಿಯ ಹಿಂದಿನ ಪರಿಶ್ರಮಕ್ಕೆ ಸಾಕ್ಷಿಯಾಗಿದ್ದುವು. (ನಿರ್ವಹಣೆ: ಶೋಭನ್ ಎಮಾಲ್ ಮತ್ತು ರವಿರಾಜ್ ) ಎಳೆಯ ಕಲಾವಿದರೇ ತುಂಬಿದ್ದ ತಂಡವಾದರೂ ಎಲ್ಲರೂ ಕಥೆಯ ಸಾಂದರ್ಭಿಕ ಮಹತ್ವವನ್ನು ಬಹಳ ಚೆನ್ನಾಗಿ ಅರ್ಥಮಾಡಿಕೊಂಡು ಒಂದು ಒಳ್ಳೆಯ ರಂಗಕೃತಿಯನ್ನು ನಿರ್ಮಿಸಿದ್ದು ಅಭಿನಂದನಾರ್ಹ ವಿಚಾರ. ⌘





# ಕುಂತಿ ತೇಲಿಬಿಟ್ಟ ಕರ್ಣನನ್ನು ಮುಳುಗಿಸಿಬಿಟ್ಟ ನೀನಾಸಂ

ರಂಗಭೂಮಿಯ ಸ್ಥಗಿತತೆಗೆ ಮೊದಲ ಕಾರಣ ನಾಟಕಗಳು ಪುರಾಣದ ವಸ್ತುವಿನ ಮೇಲೆ ಅತಿಯಾಗಿ ಅವಲಂಬಿಸಿರುವುದೇ ಆಗಿದೆ' ಎಂದು ರಂಗನಿರ್ದೇಶಕ ನಟರಾಜ ಹೊನ್ನವಳ್ಳಿ ಅಭಿಪ್ರಾಯ ಪಟ್ಟಿದ್ದಾರೆ. ಇನ್ನು ಕೆಲವರು ವಸ್ತುವನ್ನು ಎಲ್ಲಿಂದಲೇ ಆಯ್ದುಕೊಳ್ಳಲಿ ಸಮಕಾಲೀನ ಸಂದರ್ಭಕ್ಕೆ ಏನು ಹೇಳುತ್ತಿದೆ ಎಂಬುದು ಮುಖ್ಯವಾಗುತ್ತದೆ ಎಂದೂ ಹೇಳಿದ್ದಾರೆ. ಎರಡೂ ವಿಷಯಗಳು ಚರ್ಚಿಸಲ್ಪಡುವಂತವೇ ಆಗಿವೆ. ಈ ಹೇಳಿಕೆಗಳನ್ನು ಇಟ್ಟುಕೊಂಡು ನೀನಾಸಂ ತಿರುಗಾಟ 2019ರ ಕರ್ಣಸಾಂಗತ್ಯ' ನಾಟಕವನ್ನು ವಿಶ್ಲೇಷಿಸಬೇಕಾಗಿದೆ.

ಕರ್ಣನ ಬದುಕಿನ ಹಲವಾರು ನಾಟಕಗಳು ಬಂದಿರುವ ಹೊತ್ತಿಗೆ ಪಂಪ, ರನ್ನ, ಕುಮಾರವ್ಯಾಸ ಹಾಗೂ ಜನಪದ ಮಹಾಭಾರತವನ್ನು ಆಧರಿಸಿರುವ ಕರ್ಣ ಸಾಂಗತ್ಯ ನಾಟಕ ಹೊಸತೇನನ್ನೂ ಹೇಳಿಲ್ಲ. ರತನ್ ಥಿಯಾಂ, ಕನ್ಹಯ್ಯಲಾಲ್ ರಂತವರು ಕರ್ಣನನ್ನು ರಂಗಭೂಮಿಯ ಕಲಾತ್ಮಕತೆಗೆ ಒತ್ತು ನೀಡಿ ಕಣ್ಣು ಕಿವಿಗೆ ಹಿತವಾದ ಅನುಭವ ನೀಡುವ ಪ್ರಯೋಗಗಳನ್ನು ಮಾಡಿದ್ದಾರೆ. ನಿರ್ದೇಶಕ ಗಣೇಶ್ ಅದೇ ಮಾದರಿಯನ್ನು ಅನುಸರಿಸಿ ಬೆಳಕು, ಬಣ್ಣ, ಹಾಡು, ಉಡುಗೆ ತೊಡುಗೆ ಎಲ್ಲವನ್ನೂ ಚೆಂದಗೊಳಿಸಿ ನಾಟಕ ಕಟ್ಟಿದ್ದಾರೆ. ಆದರೆ ಕರ್ಣನನ್ನು ಈ ಕಾಲಕ್ಕೆ ಹೇಳಹೊರಟಿರುವ ನಾಟಕ ಜಾತಿವರ್ಗ ಸಂಘರ್ಷಗಳನ್ನು ಹೇಳುವಂತೆ ತೋರುತ್ತಾ ಕಡೆಯಲ್ಲಿ ಕರ್ಮಸಿದ್ಧಾಂತವನ್ನು ಬಲವಾಗಿ ಪ್ರತಿಪಾದಿಸುತ್ತದೆ.

ಹಲವು ನಿರ್ದೇಶಕರು ಜಾತಿಯ ಪ್ರಶ್ನೆಯನ್ನೇ ಪ್ರಧಾನವಾಗಿಟ್ಟುಕೊಂಡು ಕರ್ಣನನ್ನು ಕಟೆದು ನಿಲ್ಲಿಸಿದ್ದಾರೆ. ಪಂಪ, ರನ್ನರು ಇಂತವರಿಗೆ ಮಾದರಿಯಾಗಿರುವಂತೆ ತೋರುತ್ತದೆ. ನೀನಾಸಂನ ಈ ನಾಟಕ ಮೇಲುನೋಟಕ್ಕೆ ಪ್ರಶ್ನೆಗಳನ್ನು ಕೇಳಿದಂತೆ ಕಾಣುತ್ತದೆ ಅಷ್ಟೆ.

ಜನಪದ ಮಹಾಭಾರತದಿಂದ ಆಯ್ದುಕೊಂಡ 'ಜಂಬುನೇರಳೆ'ಯ ಪ್ರಸಂಗ ನಾಟಕದ 'ಕಾಮಿಡಿ ಟ್ರ್ಯಾಕ್' ಎನ್ನಲು ಅಡ್ಡಿಯಿಲ್ಲ. ಕಣ್ಣಫಲ' ಎಂಬ ಈ ಪ್ರಸಂಗವು ಕೆಲವು ಮಹಾಭಾರತದ ಕತೆಗಳಲ್ಲಿ ಬಂದರೂ ಜನಪದದಲ್ಲಿ ಬೇರೆಬೇರೆ ಕಡೆ ಬೇರೆಬೇರೆ ಮಾದರಿಯಲ್ಲಿ ಕೇಳಿಬರುತ್ತದೆ. ಈ ನಾಟಕದಲ್ಲಿ ತಂದ ಉದ್ದೇಶವೇನೆಂದೂ ತಿಳಿಯುವುದಿಲ್ಲ. ಕರ್ಣನ ಮೇಲೂ ನನಗೆ ಇಷ್ಟ ಇತ್ತು ನಾನವನನ್ನೂ ಬಯಸಿದ್ದೆ ಎಂದಷ್ಟೇ ಹೇಳಿಬಿಡುತ್ತಾಳೆ. ಜನಪದವು ಎಷ್ಟು ಜನಪರವೋ ಅಷ್ಟೇ ಜೀವ ವಿರೋಧಿ ಕತೆಗಳನ್ನು ತನ್ನೊಡಲೊಳಗೆ ಇಟ್ಟುಕೊಂಡಿದೆ. ಅಂತರ್ಯದಲ್ಲಿ ಯಾವ ಸ್ತ್ರೀಯೂ ಪತಿವ್ರತೆಯಲ್ಲ ಎಂದು ಹೇಳುವುದು, ಮಹಾನ್ ಪತಿವ್ರತೆ ದ್ರೌಪದಿಯೇ ಇಂತವಳಾದ ಮೇಲೆ ನಮ್ಮದೇನು ಎಂದು ಸಮರ್ಥಿಸಿಕೊಳ್ಳುವುದು ಜಂಬೂನೇರಳೆ ಕತೆಯ ಉದ್ದೇಶ. ಹೀಗಲ್ಲದೇ 'ಕರ್ಣನನ್ನು ಇಷ್ಟಪಡುವುದು ದ್ರೌಪದಿಯಲ್ಲಿ ತಾಯ್ತನದ ಗುಣಗಳನ್ನು ತೋರಿಸಿದೆ ಎಂದು ಮೂವತ್ತು ವರ್ಷಗಳ ಹಿಂದೆಯೇ ಬೇಲೂರು ತಾಲ್ಲೂಕಿನ ವೆಂಕಟಯ್ಯ ಎಂಬ ಹರಿಕತೆ ದಾಸರು ವಿಶ್ಲೇಷಣೆ ಕೊಟ್ಟಿದ್ದಾರೆ' ಎಂದು ಹಿರಿಯ ರಂಗಕರ್ಮಿ ಪ್ರಸಾದ್ ರಕ್ಷಿದಿ ನೆನಪಿಸಿಕೊಳ್ಳುತ್ತಾರೆ. ಈ ನಾಟಕದಲ್ಲಿ ಬರುವ ಈ ಕಥಾಭಾಗಕ್ಕೆ ಯಾವ ನಿರ್ದಿಷ್ಟ ಪ್ರಣಾಲಿಯೂ ಇಲ್ಲ ಎಂಬುದನ್ನು ಗಮನಿಸಬೇಕು. ಹಲವು ಸ್ತ್ರೀವಾದಿಗಳು ಹೇಳುವಂತೆ ದ್ರೌಪದಿಯ ನೇರ ಹೇಳುವ ಈ ಮಾತು ಆಕೆಯ ಧೀರ ದಿಟ್ಟತನ ತೋರುತ್ತದೆ ಎಂಬುದು ನಿಜವೇ ಆದರೂ ಇಡೀ ದೃಶ್ಯದ ಆಂಗಿಕ ಮತ್ತು ವಾಚಿಕ ಅಭಿನಯ ಅದನ್ನು ತೋರಿಸುವಲ್ಲಿ ಸೋತಿದೆ. ಅದರಲ್ಲಿ ಯಾವ ಅನುಮಾನವೂ ಇಲ್ಲ.

ನಿರ್ದೇಶಕರೊಂದಿಗೆ ನೀನಾಸಂ ಸಂಸ್ಥೆಯೂ ಸೇರಿ ಕರ್ಣನನ್ನು ಮುಗಿಸಿಹಾಕಿರುವ ಅವನ ಹಿಂದಿನ ಜನ್ಮದ ಪ್ರಸಂಗವಿದೆಯಲ್ಲ, ಅದು ಈ ಕಾಲಕ್ಕೆ ಕೊಡಬೇಕಾದ ವಿಶ್ಲೇಷಣೆಯಲ್ಲ. ಅಮೃತ ಕಲಶವನ್ನು, ಕರ್ಣ ಕುಂಡಲಗಳನ್ನು ಕವಚವನ್ನು ಕೊಟ್ಟುಬಿಡುವ ಕರ್ಣ, ಕೃಷ್ಣನಿಗೆ 'ನನ್ನ ಬದುಕು ಏಕೆ ಹೀಗಾಯಿತು? ಎಂಬ ಪ್ರಶ್ನೆ ಕೇಳುತ್ತಾನೆ ಆಗ ಕೃಷ್ಣ ಭಾಗವತರ ಮೂಲಕ ಭಾಗವತದಲ್ಲಿ ಬರುವ ಕತೆ ಹೇಳಿಸುತ್ತಾನೆ. ಕರ್ಮಸಿದ್ಧಾಂತವು ಈಗಾಗಲೇ ಹಲವರಿಗೆ ಈ ರೀತಿಯ ಗತಿಕಾಣಿಸಿರುವುದು ತಿಳಿದಿರುವ ಸಂಗತಿಯೇ ಆಗಿದೆ. ಮುಂದುವರಿದಂತೆ ಕರ್ಣ ಹಿಂದಿನ ಜನ್ಮದಲ್ಲಿ ಬಂಬೋದ್ಭವ ಎಂಬ ರಾಕ್ಷಸನಾಗಿರುತ್ತಾನೆ. ಅವನನ್ನು ನರ-ನಾರಾಯಣರು ಸೇರಿ 999 ವರ್ಷ ಕಷ್ಟಪಟ್ಟು ಕೊಲ್ಲುತ್ತಾರೆ (ಈ ಭಾಗದ ವಿಶ್ಲೇಷಣೆ ತಮಾಷೆ ಯಾಗಿದೆ). ವರ್ಷಕ್ಕೊಂದರಂತೆ 999 ಕವಚ ಹರಿದು ಒಂದು ಉಳಿಯುತ್ತದೆ. ಅದು ಕರ್ಣನ ಜನ್ಮದಲ್ಲಿ ಹರಿದು ಹೋಗುತ್ತದೆ ಯಂತೆ. ಅದಕ್ಕಾಗಿಯೇ ಕರ್ಣ ಹುಟ್ಟುವುದು. ನರ ನಾರಾಯಣ ಅಂದರೆ ಅರ್ಜುನ-ಕೃಷ್ಣ ಸೇರಿ ಮತ್ತೆ ಈ ಜನ್ಮದಲ್ಲಿ ಹಲವು ರೀತಿ ಮೋಸ ಮಾಡಿ ಕರ್ಣನನ್ನು ಕೊಲ್ಲುತ್ತಾರೆ.

ಭಾಗವತದಲ್ಲಿ ಈ ಕತೆ ಬರುತ್ತದೆ




ನಿಜ. ಯಕ್ಷಗಾನದ ಹಲವು ತಂಡಗಳು ಈ ಪ್ರಸಂಗವನ್ನು ಲಂಬಿಸಿ ಪ್ರಯೋಗ ಮಾಡಿರುವುದು ನಿಜ. ನಿರ್ದೇಶಕ ಗಣೇಶ್ ಯಕ್ಷಗಾನದವರಾಗಿ ಇಲ್ಲಿಯೂ ಅದನ್ನು ಮುಂದುವರಿಸಿದ್ದಾರೆ. ಆದರೆ ಅದು ಅವರ ಸ್ವಾತಂತ್ರ್ಯ ಎಂದುಕೊಂಡರೂ ಪ್ರಶ್ನೆ ಕೇಳದೇ ಇರಲಾಗುವುದಿಲ್ಲ. ಮುಖ್ಯವಾಗಿ ತಿರುಗಾಟದಂತ ಜವಾಬ್ದಾರಿಯುತ ಕೆಲಸ ಮಾಡುತ್ತಿರುವ ಸಂಸ್ಥೆಯೂ ಇದನ್ನು ಗಮನಿಸಬೇಕು. ಏಕೆಂದರೆ ಹಿಂದೊಮ್ಮೆ ತಿರುಗಾಟಕ್ಕೆ 'ಶೂದ್ರತಪಸ್ವಿ' ನಾಟಕ ಮಾಡಿಸಿ ಅದರಲ್ಲಿ ಕುವೆಂಪುರನ್ನು ಹೋಲುವಂತೆ, ಅವರೇ ಎಂದು ತಿಳಿದುಕೊಳ್ಳುವಂತೆ ಸೃಷ್ಟಿಸಿದ ಪಾತ್ರಕ್ಕೆ ಕಡೆಯಲ್ಲಿ ಜನಿವಾರ ಹಾಕಿದ ದೃಶ್ಯವನ್ನು ಅಸಂಬದ್ಧವಾಗಿ ತುರುಕಲಾಗಿತ್ತು. ಚರ್ಚೆಗೆ ಬಂದಾಗ ಸಂಬಂಧವೆ ಇಲ್ಲದ ಉತ್ತರಗಳನ್ನು ಹೇಳಿದ ಪ್ರಸಂಗವನ್ನು ನೆನಪಿಡಬೇಕು.

ಜಾತಿ ಎನ್ನುವ ಪ್ರಶ್ನೆಗೆ ಹತ್ತನೇ ಶತಮಾನದಲ್ಲಿಯೇ

**ಕುಲಂ ಕುಲ ಮಲ್ತು ಚಲಂಕುಲಂ**
**ಗುಣಂಕುಲಂ ಅಭಿಮಾನವೊಂದೇ**
**ಕುಲಮಣ್ಮುಕುಲಂ**

ಎಂದು ಪಂಪ ಹೇಳಿದ್ದಾನೆ. ಕುಂತಿಯೇ ಬಂದು 'ಪಾಂಡವರ ಕಡೆ ಬಾ' ಎಂದು ಕರೆದಾಗ

**'ಮೀಂಗುಲಿಗನೆನಗಾಗಿಯು**
**ಮಣಮಾಂ ಗುಣಮನೆ ಬಿಸುಟೆನಲ್ಲ**
**ನಿಮಗಂ ಮಗನಾದಂಗೆನಗೆ ಬಿಸುಡ**
**ಲಕ್ಕುಮೆ'** ಎಂದು ಉದಾತ್ತವಾಗಿ ಹೇಳುವಂತ ಕರ್ಣನನ್ನು ಸೃಷ್ಟಿಸಿದ್ದಾರೆ.

**'ನೆನೆಯದಿರಣ್ಣ ಭಾರತದೊಳಿಂ**
**ಪೆರಾನುಮನೊಂದೆ ಚಿತ್ತಂದಿಂ**
**ನೆನೆವೊಡೆ ಕರ್ಣನಂ ನೆನೆಯ'**
ಎಂಬುದಾಗಿ ಕುಮಾರವ್ಯಾಸ ಹೇಳಿದ್ದಾನೆ. **'ಕರ್ಣರಸಾಯನಮಲ್ತೆ ಭಾರತಂ'** ಎಂಬ ಮಾತುಗಳಿವೆ. ಭಾಸ, ಪಂಪ, ರನ್ನರನ್ನು ಸೇರಿಸಿ ಆಧುನಿಕ ಕಾಲದ ಹಲವು ನಾಟಕಗಳು ಕರ್ಣನ ಮೂಲಕ ಜಾತಿ ಸಮಸ್ಯೆಯನ್ನು ಹೇಳುತ್ತಾ ಹೊಸ ವ್ಯಾಖ್ಯಾನಗಳನ್ನು ನೀಡುತ್ತಿರುವ ಸಮಯಕ್ಕೆ ಭಾಗವತ ಕಥೆ ಇಟ್ಟುಕೊಂಡು ಕರ್ಣನನ್ನು ಕೊಂದದ್ದು 1000 ವರ್ಷಗಳ ಜವಾಬ್ದಾರಿ, ಅದು ಪುಣ್ಯದ ಕೆಲಸ' ಎಂದು ಹೇಳುವುದು ಇದೆಯಲ್ಲ ಇದನ್ನು ಮೂರ್ಖತನದ ಪರಮಾವಧಿ ಎಂದಷ್ಟೇ ಹೇಳಬಹುದೇನೋ?

ಪುರಾಣಗಳನ್ನೇ ಓದದ, ನೋಡಿದ್ದು-ಕೇಳಿದ್ದು ಅಂತಿಮ ಎಂದುಕೊಳ್ಳುತ್ತಿರುವ ಯುವ ಜನಾಂಗಕ್ಕೆ ಕಣ್ಣು-ಕಿವಿ ತಂಪು ಮಾಡಿ ತಲೆಯಲ್ಲಿ ಲದ್ದಿ ತುಂಬುವುದು ಅಪಾಯಕಾರಿ ಎಂಬುದನ್ನು ಮನಗಾಣಬೇಕು. ಕರ್ಣ ಸಾಂಗತ್ಯ ನಾಟಕ ನೋಡಿದ ಲಕ್ಷ್ಮೀಶ ತೋಳ್ಪಾಡಿಯವರು ಕರ್ಣನನ್ನು ನೀರಿಗೆ ಬಿಟ್ಟಿದ್ದೀರಿ' ಎಂಬ ಮಾತು ಗಂಭೀರವಾಗಿ ಪರಿಗಣಿಸುವಂತಾದ್ದು.

# ನಂದಗೋಕುಲ ದೀಪಾವಳಿ ಪುರಸ್ಕಾರಕ್ಕೆ ಆಯ್ಕೆ

■ **ವಿಕ ಸುದ್ದಿಲೋಕ** ಮಂಗಳೂರು

ಶಿರಸಿಂಡು ಯಕ್ಷಗಾನ ಕಲಾವಿದೆ, ಹತ್ತರ ಹರೆಯದ ತುಳಸಿ ಹೆಗಡೆ(10)ಗೆ ಅರೆ ಹೊಳೆ ಪ್ರತಿಷ್ಠಾನದ ವಾರ್ಷಿಕ ರಾಜ್ಯಮಟ್ಟದ ಬಾಲ ಪ್ರತಿಭಾ ಪುರಸ್ಕಾರ, ನಂದಗೋಕುಲ ದೀಪಾವಳಿ ಪುರಸ್ಕಾರ ನೀಡಲಾಗುತ್ತಿದೆ.



ತುಳಸಿ ಹೆಗಡೆ

ನಾಲ್ಕು ಯಕ್ಷಗಾನ ರೂಪಕಗಳ ಮೂಲಕ ನಾಡಿ ನಾದ್ಯಂತ ವಿಶಿಷ್ಟ ಪ್ರದರ್ಶನ ಗಳನ್ನು ನೀಡಿ ರುವ ತುಳಸಿ, ಅನೇಕ ಯಕ್ಷಗಾನ ಪ್ರಸಂಗ ಗಳಲ್ಲೂ ಭಾಗವಹಿಸಿ ಸೈ ಅನಿಸಿಕೊಂಡಿದ್ದಾರೆ. ಶಿರಸಿ ಸಮೀಪದ ಬೆಟ್ಟ ಕೊಪ್ಪದ ಕವಯತ್ರಿ ಗಾಯತ್ರಿ ಮತ್ತು ಪತ್ರಕರ್ತ ರಾಘವೇಂದ್ರ ಬೆಟ್ಟ ಕೊಪ್ಪ ದಂಪತಿ ಪುತ್ರಿಯಾಗಿ ರುವ ತುಳಸಿಗೆ ಹಲವಾರು ಪ್ರಶಸ್ತಿಗಳು ಸಂದಿವೆ.

ಬಾಲ ಪ್ರತಿಭೆಗಳಿಗೆಂದೇ ಮೀಸಲಾಗಿ ರುವ ಈ ಪ್ರಶಸ್ತಿಯು ಪ್ರಶಸ್ತಿ ಪತ್ರ, ಗೌರವ ಧನವನ್ನು ಒಳಗೊಂಡಿದ್ದು ಅ.31ರಂದು ಸಂಜೆ 6ಕ್ಕೆ ಪಾದುವಾ ಕಾಲೇಜಿನಲ್ಲಿ ನಡೆಯಲಿರುವ ದೀಪಾವಳಿ ಸಂಭ್ರಮದಲ್ಲಿ ನೀಡಲಾಗುವುದು.

ಇದೇ ಸಂದರ್ಭದಲ್ಲಿ ಕಲಾ ಕ್ಷೇತ್ರದ ಸಾಧನೆಗಾಗಿ ಬಿಜೈಯ ನೃತ್ಯ ಕಲಾವಿದೆ ವಿದುಷಿ ಶ್ರದ್ಧಾ ಎನ್.ಭಟ್ ಅವರನ್ನೂ ಸನ್ಮಾ ನಿಸಲಾಗುವುದು. ಲಯ ನ್ಸ್ ಮಾಜಿ ಗವರ್ನರ್ ಪಿ.ಕಿಶೋರ್ ರಾವ್, ಜೇಸಿಐ ಸೆನೇಟರ್ ಪೀಟರ್ ಎ. ಪಿಂಟೊ, ರಂಗಕರ್ಮಿ ಜಯದೇವ್ ಕೋಟೆ ಕಾರ್, ಸಾಧನಾ ಸಾಂಸ್ಕೃ ತಿಕ ಪ್ರತಿಷ್ಠಾನದ ಅಧ್ಯಕ್ಷ ಕಾ.ವಿ.ಕೃಷ್ಣದಾಸ್, ಪಾದು ವಾ ಕಾಲೇಜು ಪ್ರಿನ್ಸಿಪಾಲ್ ಫಾದರ್ ಆಲ್ವಿನ್ ಸೆರಾವೊ ಭಾಗವಹಿಸಲಿದ್ದಾರೆ.

ಪಾದುವಾ ರಂಗ ಅಧ್ಯ ಯನ ಕೇಂದ್ರ, ಮಸ್ಕರೇ ಡ್ ತಂಡ, ಅಸ್ತಿತ್ವ ಹಾಗೂ ಪಾದುವಾ ಥಿಯೇಟರ್ ಹಬ್‌ಗಳು ಸಹಯೋಗ ನೀಡಲಿದ್ದು, ಸಾಧನಾ ಸಾಂಸ್ಕೃತಿಕ ಪ್ರತಿಷ್ಠಾನವು ಅರೆಹೊಳೆ ಪ್ರತಿಷ್ಠಾನ ದೊಂದಿಗೆ ಆಯೋಜಿಸಿದ್ದ ಬಾಂಧವ್ಯ ಕಥಾ ಸ್ಪರ್ಧೆಯಲ್ಲಿ ವಿಜೇತರಿಗೆ ಬಹು ಮಾನ ವಿತರಣೆಯೂ ನಡೆಯಲಿದೆ ಎಂದು ಅರೆಹೊಳೆ ಪ್ರತಿಷ್ಠಾನದ ಗೌರವಾ ಧ್ಯಕ್ಷ ಹರಿಕೃಷ್ಣ ಪುನರೂರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ


# ಬ್ರಹ್ಮಾವರದಲ್ಲಿ ಪಂಚದಿನ ನಾಟಕೋತ್ಸವ ಇಂದಿನಿಂದ

ಬ್ರಹ್ಮಾವರ : ಹಾರಾಡಿಯ ಭೂಮಿಕಾ ಪ್ರಸ್ತುತಿಯಲ್ಲಿ 'ರಂಗಸಂಭ್ರಮ -2020' ಬಣ್ಣ ಪಂಚದಿನ ನಾಟಕೋತ್ಸವ ಇದೇ 12 ರಿಂದ 16ರ ವರೆಗೆ ಪ್ರತಿ ದಿನ ಸಂಜೆ 6.30ಕ್ಕೆ ಬ್ರಹ್ಮಾವರ ಎಸ್. ಎಂ.ಎಸ್ ಪಿಯು ಕಾಲೇಜಿನ ಮಕ್ಕಳ ಮಂಟಪದಲ್ಲಿ ನಡೆಯಲಿದೆ.

20 ವರ್ಷಗಳಿಂದ ರಂಗಚಟುವಟಿಕೆಯಿಂದ ಗ್ರಾಮೀಣ ಭಾಗದಲ್ಲಿಗುರುತಿಸಿಕೊಂಡಿರುವ ಭೂಮಿಕಾ ಹಾರಾಡಿ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕನ್ನಡ ನಾಟಕ ಸ್ಪರ್ಧೆಗಳಲ್ಲಿ ಪ್ರಶಸ್ತಿ ಪಡೆದಿರುವ ರಂಗ ತಂಡವಾಗಿದೆ. 6 ವರ್ಷಗಳಿಂದ ಯಶಸ್ವಿಯಾಗಿ ಈ ರಂಗಸಂಭ್ರಮ ಹೆಸರಿನಲ್ಲಿ ನಾಟಕೋತ್ಸವ ಆಚರಿಸಿಕೊಂಡು ಬರುತ್ತಿದೆ.

ಇದೇ 12ರಂದು ಮಂಗಳೂರು ಪಾದುವ ಅಧ್ಯಯನ ಕೇಂದ್ರ ಪ್ರಸ್ತುತಿಯ 'ಕೆಂಡೋನಿಯನ್ಸ್', 13ರಂದು ಭೂಮಿಕಾ ಹಾರಾಡಿ ಪ್ರಸ್ತುತಿಯ 'ನಮ್ಮ ನಿಮ್ಮೊಳಗೊಬ್ಬ', 14 ಮಣಿಪಾಲದ ಸಂಗಮ ಕಲಾವಿದೇರ್ ಪ್ರಸ್ತುತಿಯ 'ರಾಕ್ಷಸ ತಂಗಡಿ', 15 ಶನಿವಾರ ಮೂಡಬಿದಿರೆಯ ಆಳ್ವಾಸ್ ರಂಗ ಅಧ್ಯಯನ ಕೇಂದ್ರ ಪ್ರಸ್ತುತಿಯ 'ಧಾಂ ಧೂಂ ಸುಂಟರಗಾಳಿ', 16 ಭಾನುವಾರ ರಂಗಭೂಮಿ ಉಡುಪಿ ಪ್ರಸ್ತುತಿಯ 'ಕಾಮ್ಯ ಕಲಾ ಪ್ರತಿಮಾ' ನಾಟಕಗಳು ಪ್ರದರ್ಶನಗೊಳ್ಳಲಿವೆ.

# ಇಂದಿನಿಂದ ವನಸುಮ ವೇದಿಕೆ ನಾಟಕೋತ್ಸವ: ಪ್ರಶಸ್ತಿ, ಪುರಸ್ಕಾರ





**ಕಟಪಾಡಿ,ಫೆ.14:** ವನಸುಮ ವೇದಿಕೆ ಕಟಪಾಡಿ ಈ ಬಾರಿಯ ನಾಟಕೋತ್ಸವ 2020 ಕಟಪಾಡಿಯ ಎಸ್ ವಿ ಎಸ್ ಶಾಲಾ ಆವರಣದಲ್ಲಿ ಫೆ. 15 ಮತ್ತು ಫೆ. 16ರಂದು ನಡೆಯಲಿದೆ ಎಂದು ವೇದಿಕೆಯ ಅಧ್ಯಕ್ಷ ಬಾಸುಮ ಕೊಡಗು ಹೇಳಿದ್ದಾರೆ.

ಅವರು ಕಟಪಾಡಿಯಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡುತ್ತಾ ಮಾತನಾಡಿದರು.


ಪಾದುವ ರಂಗ ಅಧ್ಯಯನ ಕೇಂದ್ರದ ಕೆಂಡೋನಿಯನ್ಸ್ ಹಾಗೂ ವನಸುಮ ವೇದಿಕೆಯ ಇಲ್ಲ್ ಇಲ್ಲ್ದ ಕಥೆ ನಾಟಕ ಪ್ರದರ್ಶನ ಗೊಳ್ಳಲಿದೆ. ಇದೇ ಸಂದರ್ಭದಲ್ಲಿ ಉದ್ಯಾವರ ಮಾಧವ ಆಚಾರ್ಯರಿಗೆ ವನಸುಮ ರಂಗ ಸಮ್ಮಾನ್ ಹಾಗೂ ಪೂರ್ಣಿಮಾ ಸುರೇಶ್ ಇವರಿಗೆ ವನಸುಮ ಪುರಸ್ಕಾರ ಪ್ರಧಾನ ಮಾಡಲಾಗುವುದು. ಹಾಗೂ ಸಾಂಸ್ಕೃತಿಕ ಸೇವೆಗಾಗಿ ಸ್ವಸ್ತಿಕ್ ಕಲಾ ಸಂಘದ ರಮೇಶ್ ಕೋಟ್ಯಾನ್ ಹಾಗೂ ವೃತ್ತಿ ರಂಗ ಹಾಗೂ ಸಿನಿಮಾ ನಟ ರಘು ಪಾಂಡೇಶ್ವರ ಇವರನ್ನು ಸಮ್ಮಾನಿಸಲಾಗುವುದು ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕೋಶಾಧಿಕಾರಿ ಕಾವ್ಯವಾಣಿ ಕೊಡಗು, ಸದಸ್ಯ ಭಾಸ್ಕರ್ ಯು.ಆರ್. ಉಪಸ್ಥಿತರಿದ್ದರು.

sudina(Udupi) Edition
Feb 15, 2020 Page No. 7
Powered by : eReleGo.com

# ಕಟಪಾಡಿಯಲ್ಲಿ 15 ರಿಂದ ವನಸುಮ ನಾಟಕೋತ್ಸವ

**ವಿಕ ಸುದ್ದಿಲೋಕ** ಕಟಪಾಡಿ



**ಮಾಧವ ಆಚಾರ್ಯ**



**ಪೂರ್ಣಿಮಾ**

ಕಟಪಾಡಿ ವನಸುಮ ವೇದಿಕೆ ಪ್ರಸ್ತುತ ಪಡಿಸುವ ವನಸುಮ ನಾಟಕೋತ್ಸವ 2020 ಫೆಬ್ರವರಿ 15 ಮತ್ತು 16ರಂದು ಕಟಪಾಡಿ ಎಸ್ ವಿ ಎಸ್ ಶಾಲಾ ಆವರಣ ದಲ್ಲಿ ನಡೆಯಲಿದೆ ಎಂದು ರಂಗ ನಿರ್ದೇಶಕ, ಕಟಪಾಡಿ ವನಸುಮ ವೇದಿಕೆಯ ಅಧ್ಯಕ್ಷ ಬಾಸುಮ ಕೊಡಗು ತಿಳಿಸಿದ್ದಾರೆ.

ಅವರು ಬುಧವಾರ ಕಟಪಾಡಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಫೆ.16 ರಂದು ನಡೆಯಲಿರುವ ಉದ್ಘಾಟನಾ ಸಮಾರಂಭದಲ್ಲಿ ಕಾಪು ಶಾಸಕ ಲಾಲಾಜಿ ಮೆಂಡನ್, ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ಜೆ. ಲೋಕೇಶ್ , ಹಿರಿಯ ರಂಗಕರ್ಮಿ ಪೆರ್ಡೂರು ರತ್ನಾಕರ ಕಲ್ಯಾಣಿ, ತುಳು ಸಾಹಿತ್ಯ ಅಕಾಡೆಮಿಯ ಸದಸ್ಯೆ ತಾರಾ ಆಚಾರ್ಯ ಭಾಗವಹಿಸಲಿದ್ದಾರೆ ಮುಖ್ಯ ಅತಿಥಿಗಳಾಗಿ ಬಿ.ಜಿ. ಮೋಹನ್‌ದಾಸ್, ಟಿ. ರವೀಂದ್ರ ಪೂಜಾರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ್ ಬೆಕ್ಕೇರಿ, ಪ್ರಗತಿಪರ ಕೃಷಿಕ ಎನ್.ವಿ. ಕೃಷ್ಣಪ್ಪ ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಸಾಹಿತಿ ರಂಗ ಕರ್ಮಿ ಉದ್ಯಾವರ ಮಾಧವ ಆಚಾರ್ಯರಿಗೆ 'ವನಸುಮ ರಂಗ ಸಮ್ಮಾನ್' ಹಾಗೂ ಪೂರ್ಣಿಮಾ ಸುರೇಶ್ ಇವರಿಗೆ 'ವನಸುಮ ಪುರಸ್ಕಾರ' ಪ್ರಧಾನ ಮಾಡಲಾಗುವುದು. ಸಾಂಸ್ಕೃತಿಕ ಸೇವೆಗಾಗಿ ಸ್ವಸ್ತಿಕ್ ಕಲಾ ಸಂಘದ ರಮೇಶ್ ಕೋಟ್ಯಾನ್ ಹಾಗೂ ವೃತ್ತಿ ರಂಗ ಹಾಗೂ ಸಿನಿಮಾ ನಟ ರಘು ಪಾಂಡೇಶ್ವರ ಇವರನ್ನು ಸಮ್ಮಾನಿಸಲಾಗುವುದು.

ಫೆ.15 ರಂದು ಪಾದುವ ರಂಗ ಅಧ್ಯಯನ ಕೇಂದ್ರದ ಮಂಗಳೂರು ಇವರಿಂದ 'ಕಂಡೋನಿಯನ್ಸ್' ಹಾಗೂ ಫೆ. 16 ರಂದು ವನಸುಮ ವೇದಿಕೆ ತಂಡದ 'ಇಲ್ಲ್ ಇಲ್ಲ್‌ದ ಕಥೆ' ನಾಟಕ ಪ್ರದರ್ಶನಗೊಳ್ಳಲಿದೆ.

**ಉದ್ಯಾವರ ಮಾಧವ ಆಚಾರ್ಯರಿಗೆ ವನಸುಮ ರಂಗ ಸಮ್ಮಾನ್**

ವನಸುಮ ವೇದಿಕೆ ಕಟಪಾಡಿ ಈ ಬಾರಿಯ ನಾಟಕೋತ್ಸವದಲ್ಲಿ ಹೊಸ ಪ್ರಶಸ್ತಿಗಳನ್ನು ಆರಂಭಿಸಿದ್ದು 'ವನಸುಮ ರಂಗ ಸಮ್ಮಾನ್' ಪ್ರಶಸ್ತಿಗೆ ಹಿರಿಯ ರಂಗಕರ್ಮಿ ಸಮೂಹ ಉಡುಪಿ ಸಂಸ್ಥೆಯ ಮೂಲಕ ಹಲವಾರು ವರ್ಷಗಳಿಂದ ವಿಶಿಷ್ಟ ಶಿಸ್ತಿನ ರಂಗ ಕೈಂಕರ್ಯವನ್ನು ನಡೆಸುತ್ತಾ ಬರುತ್ತಿರುವ ಉದ್ಯಾವರ ಮಾಧವ ಆಚಾರ್ಯರವರು ಆಯ್ಕೆ ಮಾಡಲಾಗಿದೆ. ಇದೇ ಸಂದರ್ಭದಲ್ಲಿ ಅಮೋಘ ಟ್ರಸ್ಟ್ ಮೂಲಕ ನಿರಂತರ ರಂಗಭೂಮಿ ಹಾಗೂ ಸಾಹಿತ್ಯ ಸೇವೆ ಮಾಡುತ್ತಿರುವ ಪೂರ್ಣಿಮಾ ಸುರೇಶ್ ಇವರಿಗೆ 'ವನಸುಮ ಪುರಸ್ಕಾರ' ವನ್ನು ನೀಡಲಾಗುತ್ತಿದೆ. ಎರಡೂ ಪ್ರಶಸ್ತಿಗಳು ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿರುತ್ತದೆ. ಫೆಬ್ರವರಿ 15 ಮತ್ತು 16ರಂದು ನಡೆಯಲಿರುವ ನಾಟಕೋತ್ಸವದಲ್ಲಿ ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು ಎಂದರು. ಪತ್ರಿಕಾಗೋಷ್ಠಿ ಯಲ್ಲಿ ವನಸುಮ ವೇದಿಕೆಯ ಕೋಶಾಧಿಕಾರಿ ಕಾವ್ಯವಾಣಿ ಕೊಡಗು ವೇದಿಕೆಯ ಸದಸ್ಯ ಭಾಸ್ಕರ್ ಯು.ಕೆ. ಉಪಸ್ಥಿತರಿದ್ದರು.

# ಆಂಕ್ವಾರ್ ಮೇಸ್ತ್ರಿ ನಾಟಕ ಪ್ರದರ್ಶನ



ಅಸ್ತಿತ್ವ ನಾಟಕ ತಂಡದಿಂದ ಚಾಫ್ರಾ ಡಿ'ಕೋಸ್ತ ವಿರಚಿತ ಆಂಕ್ವಾರ್ ಮೆಸ್ತ್ರಿ( ಅವಿವಾಹಿತ ಶಿಕ್ಷಕ) ನಾಟಕ ಪ್ರದರ್ಶನಗೊಂಡಿತು

**ಮಹಾನಗರ**, ಆ. 6 : ಶಕ್ತಿನಗರದ ಕಲಾಂಗಣದಲ್ಲಿ ಆ. 4ರಂದು ಮಾಂಡ್ ಸೊಭಾಣ್ ಆಯೋಜಿತ ತಿಂಗಳ ವೇದಿಕೆ ಸರಣಿಯ 212ನೇ ಕಾರ್ಯಕ್ರಮ ನಡೆಯಿತು. ನಾಟಕ ನಿರ್ದೇಶಕ ಡೆನಿಸ್ ಮೊಂತೇರೊ ಕಂಚಿನ ಗಂಟೆ ಬಾರಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ವಿಶ್ವ ಗೆಳೆತನ ದಿನದ ಸಲುವಾಗಿ ಪ್ರೇಕ್ಷಕರ ಪರವಾಗಿ ಪ್ರಮೋದ್ ಪಿಂಟೋ ಚಿಕ್ಕಮಗಳೂರು ಅವರನ್ನು ಗೌರವಿಸಲಾಯಿತು. ಗುರಿಕಾರ ಎರಿಕ್ ಒಝೇರಿಯೊ, ಅಧ್ಯಕ್ಷ ಲುವಿ ಪಿಂಟೋ ಹಾಗೂ ಕಾರ್ಯದರ್ಶಿ ಕಿಶೋರ್ ಫೆರ್ನಾಂಡಿಸ್ ಉಪಸ್ಥಿತರಿದ್ದರು.

## ನಾಟಕ ಪ್ರದರ್ಶನ

